# ವಿಕಾಸ

## ವಾರ್ಷಿಕ ಸಂಚಿಕೆ: 2024-25

ತಿಳಿವು, ನಡತೆ, ಗಳಿಕೆಗಾಗಿ ಕಲಿಕೆ




**ಕಲ್ಪತರು ವಿದ್ಯಾ ಸಂಸ್ಥೆ (ರಿ)**

**ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು, ತಿಪಟೂರು**

# ವಿಕಾಸ

## ವಾರ್ಷಿಕ ಸಂಚಿಕೆ 2024-25

ತಿಳಿವು, ನಡತೆ, ಗಳಿಕೆಗಾಗಿ ಕಲಿಕೆ




ಕಲ್ಪತರು ವಿದ್ಯಾ ಸಂಸ್ಥೆ (ರಿ)

ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು, ತಿಪಟೂರು

# ಪ್ರಾಥಃಸ್ಮರಣೀಯರು



ಲಿಂಗೈಕ್ಯ ಶ್ರೀ ಪಲ್ಲಾಗಟ್ಟಿ ಅಡವಪ್ಪನವರು
ಕಲ್ಪತರು ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು



ಲಿಂಗೈಕ್ಯ ಶ್ರೀ ಜೆ.ಆರ್. ಮಹಲಿಂಗಯ್ಯನವರು
ಕಲ್ಪತರು ವಿದ್ಯಾಸಂಸ್ಥೆಯ ಸಂಸ್ಥಾಪಕ ಪ್ರಾಚಾರ್ಯರು



ಲಿಂಗೈಕ್ಯ ಶ್ರೀ ಡಿ.ಎಂ. ಶಂಕರಪ್ಪನವರು
ಕಲ್ಪತರು ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು



ಲಿಂಗೈಕ್ಯ ಶ್ರೀ ಟಿ.ಎಂ. ಮಂಜುನಾಥ್‌ರವರು
ಕಲ್ಪತರು ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು
ಕಲ್ಪತರು ತಾಂತ್ರಿಕ ಮಹಾವಿದ್ಯಾಲಯದ ಸಂಸ್ಥಾಪಕರು



ಲಿಂಗೈಕ್ಯ ಶ್ರೀ ಜಿ.ಆರ್. ಕರಿಸಿದ್ಧಾರಾಧ್ಯರು
ಕಲ್ಪತರು ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು



ಲಿಂಗೈಕ್ಯ ಶ್ರೀ ಎನ್. ಬಸವಯ್ಯ
ನಿಕಟ ಪೂರ್ವ ಅಧ್ಯಕ್ಷರು
ದಿನಾಂಕ 20-8-2007 ರಿಂದ 27-4-2014 ರವರೆಗೆ

ಕಲ್ಪತರು ವಿದ್ಯಾ ಸಂಸ್ಥೆ (ರಿ), ತಿಪಟೂರು

**ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು,**

ತಿಪಟೂರು.

# ವಿಕಾಸ

## ವಾರ್ಷಿಕ ಸಂಚಿಕೆ 2024–25

ಪ್ರಧಾನ ಸಂಪಾದಕರು

**ಡಾ. ವಿಜಯಕುಮಾರಿ ಟಿ.ಆರ್.,** ಎಂ.ಎ., ಎಂ.ಫಿಲ್., ಪಿಹೆಚ್.ಡಿ.

ಪ್ರಾಂಶುಪಾಲರು

ಸಂಪಾದಕರು

**ಪ್ರೊ. ಸತೀಶ್ ಚಂದ್ರ ಎ.ಎಂ.** ಎಂ.ಎ., ಎಂ.ಫಿಲ್.

ಮನೋವಿಜ್ಞಾನ ವಿಭಾಗ

ಸಂಪಾದಕ ಮಂಡಳಿ

**ಪ್ರೊ. ಸಿ.ಎಂ.ಎಸ್. ಲೋಕೇಶ್ವರಯ್ಯ**

**ಪ್ರೊ. ಮಲ್ಲಿಕಾರ್ಜುನ ಪ್ರಸನ್ನ ಎಸ್.ಎಸ್.**

**ಪ್ರೊ. ಶ್ರೀನಿವಾಸ ಬಿ.**

**ಡಾ. ರೇಣುಕಾ ಡಿ.**

**ಪ್ರೊ. ಭರತ್ ಆರ್.ಆರ್.**

**ಪ್ರೊ. ಹರ್ಷಿತ ಜಿ.**

**ಪ್ರೊ. ನವೀನ ಕುಮಾರಿ ಜಿ.ಎಸ್.**

# ಸಂಪಾದಕೀಯ

ಸುಖಾರ್ಥಿನಃ ಕುತೋ ವಿದ್ಯಾ ವಿದ್ಯಾರ್ಥಿನಃ ಕುತೋಃ ಸುಖಮ್ ।
ಸುಖಾರ್ಥಿ ವಾ ತ್ಯಜೇತ್ವಿದ್ಯಾ ವಿದ್ಯಾರ್ಥಿ ವಾ ತ್ಯಜೇತ್ ಸುಖಮ್ ॥

ಸುಖವನ್ನು ಬಯಸುವವನಿಗೆ ವಿದ್ಯೆ ಎಲ್ಲಿ ಸಿಗುತ್ತದೆ? ವಿದ್ಯೆಯನ್ನು ಬಯಸುವವನಿಗೆ ಸುಖ ಎಲ್ಲಿ ಸಿಗುತ್ತದೆ ? ಸುಖವನ್ನು ಬಯಸುವವನು ವಿದ್ಯೆಯನ್ನು ತ್ಯಜಿಸಬೇಕು. ವಿದ್ಯೆಯನ್ನು ಬಯಸುವವನು ಸುಖವನ್ನು ತ್ಯಜಿಸಬೇಕು.

ಕಲ್ಪತರು ನಾಡಿನ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸ ಹೊಂದಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ತಮ್ಮ ಬಾಳನ್ನು ಹಸನು ಮಾಡಿಕೊಳ್ಳಬೇಕೆಂಬುದು ಶ್ರೀ ಪಲ್ಲಾಗಟ್ಟಿ ಅಡವಪ್ಪ, ಶ್ರೀ ಜಿ.ಆರ್. ಮಹಾಲಿಂಗಯ್ಯ ಮೊದಲಾದ ಮಹಾನ್ ಚೇತನಗಳ ಕನಸಾಗಿತ್ತು. ಇವರೆಲ್ಲರ ಶ್ರಮದ ಫಲವಾಗಿ ಕಲ್ಪತರು ವಿದ್ಯಾಸಂಸ್ಥೆಯು 1962ನೇ ಇಸವಿಯಲ್ಲಿ ಪ್ರಾರಂಭಗೊಂಡಿತು.

ಪ್ರತಿ ವರ್ಷ ಕಾಲೇಜಿನ ಸಮಗ್ರ ವಾರ್ಷಿಕ ಚಟುವಟಿಕೆಗಳ ಪ್ರತಿಬಿಂಬವಾಗಿ ವಿಕಾಸ ವಾರ್ಷಿಕ ಸಂಚಿಕೆಯನ್ನು ಹೊರತರಲಾಗುತ್ತದೆ. ವಿಕಾಸ ವಾರ್ಷಿಕ ಸಂಚಿಕೆಯು ನಮ್ಮ ಕಾಲೇಜಿನ ಕ್ರೀಡಾ, ಸಾಂಸ್ಕೃತಿಕ, ಬೌದ್ಧಿಕ ಮತ್ತು ಸೃಜನಶೀಲ ಶಕ್ತಿಗಳ ಪ್ರತೀಕವಾಗಿದೆ. ಕಾಲೇಜು ಶಿಕ್ಷಣವು ಪಠ್ಯ ವಿಷಯಗಳಿಗೆ ಮಾತ್ರ ಸೀಮಿತಗೊಳ್ಳದೆ, ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡುತ್ತದೆ.

ಕಾಲೇಜಿನಲ್ಲಿ ಶಿಕ್ಷಣ ನೀಡುವುದರ ಜೊತೆಗೆ ಕಲೆ, ಸಾಂಸ್ಕೃತಿಕ, ಸಾಹಿತ್ಯ, ಎನ್.ಎಸ್.ಎಸ್., ರೆಡ್‌ಕ್ರಾಸ್ ಮೊದಲಾದ ಕಾರ್ಯ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾ ಮನೋಭಾವ, ಆತ್ಮವಿಶ್ವಾಸ, ನಾಯಕತ್ವ ಗುಣಗಳು, ಮಾನವೀಯ ಮೌಲ್ಯಗಳನ್ನು ಬೆಳಸುತ್ತದೆ. ಇದಕ್ಕೆ ಪೂರಕವಾಗಿ, ಕಲ್ಪತರು ವಿದ್ಯಾಸಂಸ್ಥೆ ಹಾಗೂ ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಇವರ ಸಹಯೋಗದಿಂದ ದಿನಾಂಕ 9-01-2025ರಂದು "ಬೃಹತ್ ಉದ್ಯೋಗ ಮೇಳವನ್ನು" ಕಲ್ಪತರು ಕಾಲೇಜು ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಈ ಬೃಹತ್ ಉದ್ಯೋಗ ಮೇಳದಲ್ಲಿ ಸುಮಾರು 2500ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಿದ್ದರು. 70ಕ್ಕೂ ಹೆಚ್ಚು ಕಂಪನಿಗಳು ಬೆಂಗಳೂರು ಮತ್ತು ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದವು. 400ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಅರ್ಹತಾ ಪತ್ರವನ್ನು ನೀಡಲಾಯಿತು. ಈ ಬೃಹತ್ ಉದ್ಯೋಗಮೇಳವು ವಿದ್ಯಾರ್ಥಿಗಳ ಕೌಶಲ್ಯ, ಉದ್ಯೋಗದ ಬಗ್ಗೆ ಮಾಹಿತಿ ಮತ್ತು ಅರಿವನ್ನು ಉಂಟುಮಾಡುವ ಉತ್ತಮ ವೇದಿಕೆಯಾಗಿತ್ತು. ಈ ರೀತಿಯ ಕಾರ್ಯಕ್ರಮಗಳು ನಿರುದ್ಯೋಗ ನಿವಾರಣೆಗೆ ಸಹಾಯವಾಗುವುದಲ್ಲದೆ, ವಿದ್ಯಾರ್ಥಿಗಳ ಭವಿಷ್ಯವನ್ನು ಸೃಷ್ಟಿಸುವುದರಲ್ಲಿ ಪ್ರೇರಣಾದಾಯಕವಾಗಿರುತ್ತದೆ.

2024-25ನೇ ಸಾಲಿನ ವಾರ್ಷಿಕ ಸಂಚಿಕೆಯು ವಿದ್ಯಾರ್ಥಿಗಳ ಕಲ್ಪನಾಶಕ್ತಿಯನ್ನು, ಸೃಜನಶೀಲತೆಯನ್ನು, ಅಭಿಪ್ರಾಯಗಳನ್ನು ಹೊರಹಾಕುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಇರಬೇಕಾದ ಗ್ರಂಥಾಲಯ, ಪ್ರಯೋಗಾಲಯ, ತರಗತಿ ಕೊಠಡಿಗಳು, ವಿಶಾಲವಾದ ಆಟದ ಮೈದಾನ, ಭವ್ಯ ಸಭಾಂಗಣ, ಸುಂದರ ಉದ್ಯಾನವನ ಮುಕ್ತ ಕಲಿಕೆಗೆ ಅವಕಾಶ ನೀಡುತ್ತದೆ. ಬೋಧಕ, ಬೋಧಕೇತರರ ಶ್ರಮದ ಫಲವಾಗಿ ಕಾಲೇಜು ಸತತ 63ವರ್ಷಗಳು ಮುನ್ನಡೆಯಲು ಸಾಧ್ಯವಾಗಿದೆ. ನಮ್ಮ ಕಾಲೇಜು ನಾಲ್ಕನೇ ಆವೃತ್ತಿಯಲ್ಲಿ ನ್ಯಾಕ್ ಸಮಿತಿಯಿಂದ 'ಬಿ' ಗ್ರೇಡ್ ಪಡೆದುಕೊಂಡಿದೆ.

ವಿದ್ಯಾರ್ಥಿಗಳು ತಮ್ಮ ಜ್ಞಾನ ಅರಿವಿನಿಂದ ಸಮಾಜಕ್ಕೆ ಒಳಿತನ್ನು ಉಂಟುಮಾಡಲಿ ಎಂಬುದು ನಮ್ಮೆಲ್ಲರ ಆಶಯವಾಗಿರುತ್ತದೆ. ಈ ವಿಕಾಸ ವಾರ್ಷಿಕ ಸಂಚಿಕೆ ಸುಂದರವಾಗಿ ಮೂಡಿಬರಲು ಸಹಕರಿಸಿದ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕ-ಶಿಕ್ಷಕೇತರ ವೃಂದ, ವಿದ್ಯಾರ್ಥಿವೃಂದ ಹಾಗೂ ಸಂಚಿಕೆಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಶಂಕರ್ ಆಫ್‌ಸೆಟ್ ಪ್ರಿಂಟರ್ಸ್‌ನ ದಯಾನಂದರವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಸತೀಶ್ ಚಂದ್ರ ಎ.ಎಂ.**
ಸಂಪಾದಕರು

# MESSAGE FROM THE PRINCIPAL

It is with great pride and immense joy that I present this message for our college magazine VIKASA a wonderful platform that encapsulates the vibrant life, academic spirit, and creative endeavors of Pallagatti Adavappa Arts and Commerce First Grade College, Tiptur.

The past academic year has been remarkable in many ways. Our college has not only upheld its tradition of academic excellence but has also broadened its horizons to offer valuable opportunities for students to excel beyond classrooms. Our Student Nischitha V.S. Secures 7th Rank in Tumkur University and the other was Rakshitha M.R. who was highest scorer in commerce (Under ST Category) in Tumkur University. One of the greatest milestones was the Mega Job Mela organized by our Kalpatharu vidya samsthe on our campus, which opened doors to numerous employment opportunities for our aspiring graduates. It was heartening to see leading companies participating and many of our students stepping confidently into the professional world.

We also proudly hosted programs like Rotary Youth Leadership Awards (RYLA), tally and advance excel, company analysis and industry expectations were empowering platform where students honed their leadership skills, embraced social responsibility, and gained life-changing experiences. This program added immense value to our students' personal and professional development.

Another significant initiative was the cultural competitions for PU students, providing them a stage to showcase their talents, build self-confidence, and nurture a spirit of healthy competition. Such events truly celebrate the vibrant cultural heritage and youthful energy of our institution.

Further, each department actively contributed to the intellectual growth of our students by organizing department-wise lecture programs, seminars, and workshops, which enriched academic learning and exposed students to the latest developments in their respective fields.

I sincerely appreciate the dedication and hard work of our students, faculty, and the editorial team who have beautifully captured all these memorable moments in this edition of the magazine. I encourage all students to continue exploring, learning, and contributing meaningfully to society.

Let this magazine be a source of pride and inspiration for everyone associated with our institution.

Warm regards,

**Dr. Vijaya Kumari T R**

Principal

# ಕಲ್ಪತರು ವಿದ್ಯಾ ಸಂಸ್ಥೆ (ರಿ) ತಿಪಟೂರು

## ಕಾರ್ಯಕಾರಿ ಮಂಡಳಿ



**ಶ್ರೀ ಪಿ.ಕೆ. ತಿಪ್ಪೇರುದ್ರಪ್ಪ**

ಅಧ್ಯಕ್ಷರು



ಶ್ರೀ ಬಾಗೇಪಲ್ಲಿ. ಎಸ್. ನಟರಾಜು
ಉಪಾಧ್ಯಕ್ಷರು



ಶ್ರೀ ಟಿ.ಎಸ್. ಬಸವರಾಜು
ಉಪಾಧ್ಯಕ್ಷರು



ಶ್ರೀ ಬಿ.ಎಸ್. ಉಮೇಶ್
ಉಪಾಧ್ಯಕ್ಷರು



ಶ್ರೀ ಜಿ.ಪಿ. ದೀಪಕ್
ಉಪಾಧ್ಯಕ್ಷರು



ಶ್ರೀ ಟಿ.ಯು. ಜಗದೀಶಮೂರ್ತಿ
ಕಾರ್ಯದರ್ಶಿಗಳು



ಶ್ರೀ ಜಿ.ಎಸ್. ಉಮಾಶಂಕರ್
ಕಾರ್ಯದರ್ಶಿಗಳು



ಶ್ರೀ ಎಂ.ಆರ್. ಸಂಗಮೇಶ್
ಕಾರ್ಯದರ್ಶಿಗಳು



ಶ್ರೀ ಸುಧಾಕರ್ ಹೆಚ್.ಜಿ.
ಕಾರ್ಯದರ್ಶಿಗಳು



ಶ್ರೀ ಟಿ.ಎಸ್. ಶಿವಪ್ರಸಾದ್

ಖಜಾಂಚಿಗಳು

## VISION:

- Education For Wisdom, Conduct And Livelihood.

## MISSION:

- To Impart Quality Education For All, At An Affordable Fee
- To Inculcate Values As Culturally Refined And Socially Acceptable Responsible Citizens.
- To Acquire Competence Through Holistic Education.




**ಡಾ. ವಿಜಯಕುಮಾರಿ ಟಿ.ಆರ್.,** ಎಂ.ಎ., ಎಂ.ಫಿಲ್., ಪಿಹೆಚ್.ಡಿ.

ಪ್ರಾಂಶುಪಾಲರು




**ಡಾ. ಉಮೇಶ್,** ಎಂ.ಎ., ಪಿಹೆಚ್.ಡಿ.

ನಿಕಟಪೂರ್ವ ಪ್ರಾಂಶುಪಾಲರು (01–05–2024 ರಿಂದ 30–04–2025)



राष्ट्रीय मूल्यांकन एवं प्रत्यायन परिषद

विश्वविद्यालय अनुदान आयोग का स्वायत्त संस्थान

NATIONAL ASSESSMENT AND ACCREDITATION COUNCIL

An Autonomous Institution of the University Grants Commission

*Certificate of Accreditation*

The Executive Committee of the
National Assessment and Accreditation Council
is pleased to declare
Pallagatti Adavappa Arts and Commerce First Grade College
NH-206, Tiptur, Dist. Tumkur, affiliated to Tumkur University,
Karnataka as
Accredited
with CGPA of 2.31 on four point scale
at B grade
valid up to August 11, 2028

Date : August 12, 2023

Director

EC(SC)/162/4th Cycle/KACOGN10240

## ನಿವೃತ್ತಿ ಹೊಂದಿದವರು



**ಪ್ರೊ. ಹೆಚ್.ಆರ್. ಧನಂಜಯ** ಎಂ.ಎ.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು

# ಫೋಟೋ ಗ್ಯಾಲರಿ : 2024–25



ಪ್ರಾಂಶುಪಾಲರೊಂದಿಗೆ ಅಧ್ಯಾಪಕ ವೃಂದ



ಸಂಪಾದಕ ಮಂಡಳಿ
'ವಿಕಾಸ' ವಾರ್ಷಿಕ ಸಂಚಿಕೆ ಸಮಿತಿ



ಸಾಂಸ್ಕೃತಿಕ ಸಮಿತಿ



ಉದ್ಯೋಗ ಮತ್ತು ಮಾಹಿತಿ ಸಮಿತಿ



ಯುವ ರೆಡ್‌ಕ್ರಾಸ್ ಸಮಿತಿ



**IQAC** ಸಮಿತಿ

## ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು, ತಿಪಟೂರು.

### ಬೋಧಕ ವರ್ಗ

ಪ್ರಾಂಶುಪಾಲರು :

**ಡಾ. ವಿಜಯಕುಮಾರಿ ಟಿ.ಆರ್.,** ಎಂ.ಎ., ಎಂ.ಫಿಲ್., ಪಿ.ಹೆಚ್.ಡಿ.

ಕನ್ನಡ ವಿಭಾಗ : **ಡಾ. ರೇಣುಕಾ .ಡಿ** ಎಂ.ಎ., ಬಿ.ಇಡಿ.,ಪಿಹೆಚ್.ಡಿ.,NET, ಮುಖ್ಯಸ್ಥರು.
**ಶ್ರೀ ಹೆಚ್.ಎಸ್.ವಿಶ್ವನಾಥ್,** ಎಂ.ಎ, ಬಿ.ಇಡಿ.
**ಶ್ರೀ ಬಿ.ಸಿ.ರವಿಶಂಕರ್,** ಎಂ.ಎ., ಬಿ.ಇಡಿ., KSET.
**ಶ್ರೀ ಡಿ.ಎಸ್. ಇಂದ್ರೇಶ್,** ಎಂ.ಎ., ಎಂ.ಫಿಲ್., ಬಿ.ಇಡಿ.

ಇಂಗ್ಲಿಷ್ ವಿಭಾಗ : **ಪ್ರೊ. ಸಿ.ಎಂ.ಎಸ್.ಲೋಕೇಶ್ವರಯ್ಯ** ಎಂ.ಎ., ಎಂ.ಫಿಲ್., ಬಿ.ಎ.ಇ.ಡಿ, ಮುಖ್ಯಸ್ಥರು.
**ಡಾ.ಜಿ.ಎನ್.ಉಮೇಶ್,** ಎಂ.ಎ., ಎಂ.ಫಿಲ್., ಪಿಹೆಚ್.ಡಿ., ಪಿಜಿಡಿಇ.
**ಪ್ರೊ. ವಿನುತ ಬಿ.ಸಿ.,** ಎಂ.ಎ.
**ಶ್ರೀಮತಿ ಅರ್ಚನಾ ವೆಂಕಟೇಶ್** ಎಂ.ಎ., ಎಂ.ಫಿಲ್.
**ಶ್ರೀಮತಿ ಪೂಜಾ ಜೆ.ಕೆ.,** ಎಂ.ಎ., ಬಿ.ಇಡಿ.

ಹಿಂದಿ ವಿಭಾಗ : **ಶ್ರೀ ವಿರೂಪಾಕ್ಷಪ್ಪ ಹೆಚ್.ಜಿ ,** ಎಂ.ಎ.

ಇತಿಹಾಸ ವಿಭಾಗ : **ಡಾ.ಜಿ.ಎಂ.ಲಲಾಟಾಕ್ಷಮೂರ್ತಿ** ಎಂ.ಎ., ಎಂ.ಫಿಲ್., ಪಿಹೆಚ್.ಡಿ. ಮುಖ್ಯಸ್ಥರು.
**ಡಾ. ಸಿದ್ದಲಿಂಗಮೂರ್ತಿ** ಎಂ.ಎ., ಪಿಹೆಚ್.ಡಿ., KSET

ಅರ್ಥಶಾಸ್ತ್ರ ವಿಭಾಗ : **ಶ್ರೀ ಎಂ.ಸಿ.ಯೋಗಾನಂದ** ಎಂ.ಎ., ಬಿ.ಇಡಿ., KSET, ಮುಖ್ಯಸ್ಥರು

ರಾಜ್ಯಶಾಸ್ತ್ರ ವಿಭಾಗ : **ಶ್ರೀ ಎಸ್.ಎಂ. ಗಂಗಾಧರಪ್ಪ** ಎಂ.ಎ. ಮುಖ್ಯಸ್ಥರು
**ಶ್ರೀಮತಿ ಅಂಬಿಕಾ** ಎಂ.ಎ., ಬಿ.ಇಡಿ.

ಸಮಾಜಶಾಸ್ತ್ರ ವಿಭಾಗ : **ಶ್ರೀ ಆರ್.ಆರ್. ಭರತ್,** ಎಂ.ಎ. ಮುಖ್ಯಸ್ಥರು

ಮನಃ ಶಾಸ್ತ್ರ ವಿಭಾಗ : **ಪ್ರೊ. ಎ.ಎಂ. ಸತೀಶ್‌ಚಂದ್ರ,** ಎಂ.ಎ., ಎಂ.ಫಿಲ್. ಮುಖ್ಯಸ್ಥರು
**ಡಾ. ಹೆಚ್.ವಿ. ವಿನುತ** ಎಂ.ಎಸ್ಸಿ., ಪಿ.ಹೆಚ್.ಡಿ.

ಭೂಗೋಳಶಾಸ್ತ್ರ ವಿಭಾಗ : **ಶ್ರೀ ಎ.ಎಂ. ಕಾಂತರಾಜು,** ಎಂ.ಎಸ್ಸಿ., ಮುಖ್ಯಸ್ಥರು
**ಶ್ರೀ ಎಂ.ಎಲ್. ಬೋರೇಗೌಡ,** ಎಂ.ಎಸ್ಸಿ.

| | |
|---|---|
| ವಾಣಿಜ್ಯ ಶಾಸ್ತ್ರ ವಿಭಾಗ : | **ಪ್ರೊ. .ಎಸ್.ಎಸ್. ಮಲ್ಲಿಕಾರ್ಜುನ ಪ್ರಸನ್ನ** ಎಂ.ಕಾಂ., ಎಂ.ಫಿಲ್., ಪಿ.ಜಿ.ಡಿ.ಬಿ.ಎಂ. ಮುಖ್ಯಸ್ಥರು |
| | **ಶ್ರೀಮತಿ ಎಸ್. ಲತಾ** ಎಂ.ಕಾಂ., ಎಂ.ಫಿಲ್. |
| | **ಶ್ರೀಮತಿ ಸಿ.ಎಂ. ದಿವ್ಯಾ ಚೇತನ್** ಎಂ.ಕಾಂ. |
| | **ಶ್ರೀ ಎಂ.ಎನ್. ರೇಣು** ಎಂ.ಕಾಂ. |
| | **ಶ್ರೀ ಕೆ.ಸಿ.ಪಾತೇಶ್** ಎಂ.ಕಾಂ., NET, KSET ಬಿ.ಇಡಿ. |
| | **ಶ್ರೀಮತಿ ಜ್ಯೋತಿ.ಜಿ.** ಎಂ.ಕಾಂ., KSET |
| | **ಶ್ರೀಮತಿ ನವೀನ ಕುಮಾರಿ** ಎಂ.ಕಾಂ. |
| | **ಶ್ರೀಮತಿ ಹರ್ಷಿತ ಜಿ.** ಎಂ.ಕಾಂ., ಬಿ.ಇಡಿ. |
| | **ಶ್ರೀಮತಿ ಕಾವ್ಯ .ಎಂ** ಎಂ.ಕಾಂ., KSET |
| ಸ್ನಾತಕೋತ್ತರ ವಿಭಾಗ : | **ಶ್ರೀಮತಿ ಎಸ್.ಲತಾ.** ಎಂ.ಕಾಂ., ಎಂ.ಫಿಲ್. ಸಂಯೋಜಕರು |
| | **ಶ್ರೀ ದಿಲೀಪ್ ಹೆಚ್.ಆರ್.** ಎಂ.ಕಾಂ., ಎಂ.ಬಿ.ಎ. |
| | **ಶ್ರೀಮತಿ ಸಿ.ಎಂ.ದಿವ್ಯ.** ಎಂ.ಕಾಂ. |
| | **ಶ್ರೀಮತಿ ಹೆಚ್.ಡಿ.ಅನುಷ,** ಎಂ.ಬಿ.ಎ. |
| | **ಶ್ರೀಮತಿ ನವೀನ ಕುಮಾರಿ ಜಿ.ಎಸ್.,** ಎಂ.ಕಾಂ. |
| ದೈಹಿಕ ಶಿಕ್ಷಣ ವಿಭಾಗ : | **ಪ್ರೊ ಬಿ. ಶ್ರೀನಿವಾಸ** ಎಂ.ಪಿ.ಇಡಿ., ಎಂ.ಫಿಲ್., KSET ದೈಹಿಕ ಶಿಕ್ಷಣ ನಿರ್ದೇಶಕರು |
| ಗ್ರಂಥಾಲಯ ವಿಭಾಗ : | **ಶ್ರೀಮತಿ ಇರುದಯ ಮೇರಿ. ಎಂ,** NMLISC, PG, DCA, KSET, ಗ್ರಂಥಪಾಲಕರು |
| | **ಶ್ರೀ ಅನಿಲ್,** ದ್ವಿದ. ಸಹಾಯಕರು. |
| | **ಶ್ರೀಮತಿ ರೇಖಾ,** ದ್ವಿತೀಯ ದರ್ಜೆ ಸಹಾಯಕರು. |
| | **ಶ್ರೀಮತಿ ಕಲ್ಪನಾ** ಸಹಾಯಕರು. |
| ಕಛೇರಿ ಸಿಬ್ಬಂದಿ : | **ಶ್ರೀಧರ್ ಬಿ** |
| | **ಶ್ರೀಮತಿ ಸುಜಾತ ಟಿ.ಎಂ.** |
| | **ಶ್ರೀಮತಿ ಅನುಸೂಯ. ಎನ್.** |
| | **ಶ್ರೀ ಆನಂದ ಟಿ.ಆರ್.** |
| | **ಶ್ರೀಮತಿ ಸುಮಿತ್ರ ಡಿ.ಎಸ್.** |
| | **ಶ್ರೀ ವಿಶ್ವನಾಥ್.** |
| | **ಶ್ರೀ ಚಂದ್ರೇಶ್.** |
| | **ಶ್ರೀ ಮೋಹಿತ್ ಕೆ.ಆರ್.** |
| ಸಹಾಯಕರು : | **ಶ್ರೀ ಗುರುಪಾದಯ್ಯ, ಶ್ರೀ ಎ.ಸಣ್ಣಯ್ಯ, ಶ್ರೀ ಹೆಚ್.ಬಿ.ಯೋಗಾನಂದ. ಶ್ರೀ ಎಂ.ಎಸ್.ಮಂಜಪ್ಪ, ಶ್ರೀಮತಿ ಕೋಮಲಮ್ಮ, ಶ್ರೀ ಬಸವರಾಜು, ಶ್ರೀಮತಿ ರಾಧ, ಶ್ರೀ ರಾಜಣ್ಣ.** |

## ಎನ್. ಎಸ್. ಎಸ್ (ರಾಷ್ಟ್ರೀಯ ಸೇವಾ ಯೋಜನೆ) ವರದಿ

ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಎನ್.ಎಸ್.ಎಸ್ (ರಾಷ್ಟ್ರೀಯ ಸೇವಾ ಯೋಜನೆಯ) ಮೂರು ಘಟಕಗಳನ್ನು ಹೊಂದಿದ್ದು, ಸುಮಾರು 300 ವಿದ್ಯಾರ್ಥಿಗಳನ್ನು 2023–24 ನೇ ಸಾಲಿನಲ್ಲಿ ನೊಂದಾಯಿಸಿಕೊಳ್ಳಲಾಗಿದೆ. ಕಾರ್ಯಕ್ರಮಾಧಿಕಾರಿಗಳಾಗಿ ಪ್ರೊ. ಸಿ.ಎಂ.ಎಸ್. ಲೋಕೇಶ್ವರಯ್ಯ, ಪ್ರೊ ಶ್ರೀನಿವಾಸ ಬಿ ಹಾಗೂ ಪ್ರಾಧ್ಯಾಪಕ ಎಂ.ಸಿ. ಯೋಗಾನಂದ ಇವರು ಕ್ರಮವಾಗಿ ಘಟಕ 1, 2, 3 ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರತಿ ವರ್ಷದಂತೆ ಈ ವರ್ಷವೂ ವಿದ್ಯಾರ್ಥಿಗಳಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ನಾಯಕತ್ವ ಬೆಳವಣಿಗೆ, ವ್ಯಕ್ತಿತ್ವ ವಿಕಸನ, ಕಾನೂನಿನ ಅರಿವು, ಜಲ ಸಂರಕ್ಷಣೆ, ಪರಿಸರ ರಕ್ಷಣೆ, ಸ್ವಚ್ಛತಾ ಆಂದೋಲನ ಮುಂತಾದ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಯಿತು. ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಚಟುವಟಿಕೆಗಳ ಉದ್ಘಾಟನೆಯನ್ನು ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ.ಎನ್.ಉಮೇಶ್ ನೆರವೇರಿಸಿದರು.

ದಿನಾಂಕ 15–8–24 ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಪ್ರಯುಕ್ತ ಮಾನವ ಸರಪಳಿ ನಿರ್ಮಿಸಲು ನಮ್ಮ ಕಾಲೇಜಿನ 08 ಜನ ವಿದ್ಯಾರ್ಥಿಗಳನ್ನು ತುಮಕೂರಿಗೆ ಕಳುಹಿಸಿಕೊಡಲಾಯಿತು. ದಿನಾಂಕ 2–12–24 ರಂದು ಸಾರ್ವಜನಿಕ ಆಸ್ಪತ್ರೆ, ತಿಪಟೂರು ಇವರು ಹಮ್ಮಿಕೊಂಡಿದ್ದ ಹೆಚ್.ಐ.ವಿ. ಮುಕ್ತ ಭಾರತ ನಿರ್ಮಾಣ ಸಂಕಲ್ಪ ಜಾಥಾ ಕಾರ್ಯಕ್ರಮದಲ್ಲಿ ನಮ್ಮ ಎನ್.ಎಸ್.ಎಸ್. ಸ್ವಯಂ ಸೇವಕರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಥಾ ಹೊರಟು ಹೆಚ್.ಐ.ವಿ. ರೋಗದ ಬಗ್ಗೆ ಅರಿವು ಮೂಡಿಸಿದರು. .

ದಿನಾಂಕ 30–11–24 ರಂದು ನೆಹರು ಯುವ ಕೇಂದ್ರ ತುಮಕೂರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಯುವ ಜನೋತ್ಸವ ಸ್ಪರ್ಧೆಯಲ್ಲಿ ಭಾಗವಹಿಸಿ ನಮ್ಮ ಕಾಲೇಜಿನ ಎನ್.ಎಸ್.ಎಸ್.ವಿದ್ಯಾರ್ಥಿ ಡ್ಯಾನಿಯಲ್ ಡಿ.ಎಂ. ಇವರು ಚಿತ್ರ ಕಲೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದಿರುತ್ತಾರೆ.

ದಿನಾಂಕ 21–10–2024 ರಿಂದ 27–10–24 ರವರೆಗೆ ಹರಿಯಾಣದ ಕುರುಕ್ಷೇತ್ರ ವಿಶ್ವವಿದ್ಯಾಲಯವು ಹಮ್ಮಿಕೊಂಡಿದ್ದ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ನಮ್ಮ ಕಾಲೇಜಿನ 07 ಜನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಈ ಶಿಬಿರವನ್ನು ಉನ್ನತ ಶಿಕ್ಷಣ ಇಲಾಖೆ ಹರಿಯಾಣ ಸರ್ಕಾರ ಎನ್.ಎಸ್.ಎಸ್. ಘಟಕ ಕುರುಕ್ಷೇತ್ರ ವಿಶ್ವವಿದ್ಯಾಲಯ ಹಾಗೂ ಎನ್.ಡಿ. (ಪಿ ಜಿ) ಕಾಲೇಜು, ಪಾಣಿಪಟ್ ಜಂಟಿಯಾಗಿ ಆಯೋಜಿಸಿದ್ದವು. ಚರಣ್ ರಾಜ್ .ಆರ್, ಯುವರಾಜ್ ಬಿ ಟಿ., ಜಗದೀಶ್, ಚಂದನ, ಜ್ಯೋತಿ ಆರ್.ಕೆ., ಪೂಜಾ ಪಿ, ಲೋಚನ ವೈ ಇವರು ಪಾಲ್ಗೊಂಡಿದ್ದರು.

ಕರ್ನಾಟಕ ಸರ್ಕಾರ ರಾಷ್ಟ್ರೀಯ ಸೇವಾ ಯೋಜನೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗಾಂಧಿ ಅಧ್ಯಯನ ಕೇಂದ್ರ ಬೆಂಗಳೂರು ಹಾಗೂ ಎಸ್.ಜೆ.ಆರ್. ಮಹಿಳಾ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 16–10–24 ರಿಂದ 22–10–24 ರ ವರೆಗೆ ರಾಜ್ಯ ಮಟ್ಟದ ಯುವ ನಾಯಕತ್ವ ಮತ್ತು ಗಾಂಧಿ ತತ್ವ ಪ್ರೇರಿತ ಶಿಬಿರದಲ್ಲಿ ನಮ್ಮ ಕಾಲೇಜಿನ ಅಂಕಿತ ಟಿ.ಆರ್., ಲಿಖಿತ ಜೆ.ಎ., ತನುಜ.ಕೆ.ಎಂ., ತೇಜಸ್ವಿನಿ ಹೆಚ್.ಎಸ್., ಹಾಗೂ ಕೃತಿಕಾ ಜಿ.ಟಿ. ಪಾಲ್ಗೊಂಡಿದ್ದರು. .

ದಿನಾಂಕ 31–10–24 ರಂದು ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮ ದಿನದ ಪ್ರಯುಕ್ತ ರಾಷ್ಟ್ರೀಯ ಏಕತಾ ದಿವಸ ಆಚರಿಸಲಾಯಿತು. ದಿನಾಂಕ 21–06–24 ರಂದು ವಿಶ್ವಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಕಲ್ಪತರು ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಜಿ.ಪಿ. ದೀಪಕ್ ಹಾಗೂ ಕಲ್ಪತರು ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಹೆಚ್.ಜಿ. ಸುಧಾಕರ್ ಆಗಮಿಸಿದ್ದರು. ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ. ಸಿ.ಎಂ.ಎಸ್. ಲೋಕೇಶ್ವರಯ್ಯ ಯೋಗಾಸನದ ಪಟ್ಟುಗಳನ್ನು ತಿಳಿಸಿಕೊಟ್ಟರು.

ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಮ್ಮ ಕಾಲೇಜಿನಿಂದ 12 ಜನ ವಿದ್ಯಾರ್ಥಿಗಳು ಹಾಗೂ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಾದ ಸಿ.ಎಂ.ಎಸ್. ಲೋಕೇಶ್ವರಯ್ಯ, ಎಂ.ಸಿ. ಯೋಗಾನಂದ ಪಾಲ್ಗೊಂಡಿದ್ದರು. ದಿನಾಂಕ 9–8–24 ರಂದು ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ ತುಮಕೂರು ಇವರು ಯುವಜನೋತ್ಸವ ಅಂಗವಾಗಿ ಏರ್ಪಡಿಸಿದ್ದ ಈ–ಕ್ವಿಜ್ ಸ್ಪರ್ಧೆಯಲ್ಲಿ ಶ್ರೀ ಚರಣ್ ರಾಜ್ ಆರ್ ಇವರು ದ್ವಿತೀಯ ಬಹುಮಾನ ಪಡೆದಿರುತ್ತಾರೆ. ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕರ್ನಾಟಕ ಸರ್ಕಾರ, ಎನ್ ಎಸ್ ಎಸ್ ಘಟಕ ಕರ್ನಾಟಕ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಸಂಸ್ಕೃತಿ ಕಾನೂನು ಕಾಲೇಜು ಚಿತ್ರದುರ್ಗ ಇವರು ಜಂಟಿಯಾಗಿ ದಿನಾಂಕ 4–4–25 ಹಾಗೂ 5–5–25 ರಂದು ಏರ್ಪಡಿಸಿದ್ದ ಎರಡು ದಿನದ ಪುನಶ್ಚೇತನ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ ಎನ್.ಎಸ್.ಎಸ್. ವಿದ್ಯಾರ್ಥಿ ಚರಣ್ ರಾಜ್ .ಆರ್. ಇವರು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಯುವ ಸಬಲೀಕರಣ ಎಂಬ ವಿಷಯದ ಮೇಲೆ ಆನ್‌ಲೈನ್ ಮೂಲಕ ಪ್ರಂಬಂಧ ಮಂಡಿಸಿದರು. .

ದಿನಾಂಕ 3–5–25 ರಿಂದ 9–5–25 ರವರೆಗೆ ತಿಪಟೂರು ತಾಲ್ಲೂಕು ಚಿಕ್ಕಹೊನ್ನವಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ತಿಪಟೂರಿನ ಶಾಸಕ ಶ್ರೀ ಕೆ. ಷಡಕ್ಷರಿ, ಇವರು ನೆರವೇರಿಸಿದರು. ಕಲ್ಪತರು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಪಿ.ಕೆ. ತಿಪ್ಪೇರುದ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಸುಶೀಲ ಜಿ.ಎಸ್. ಅಧ್ಯಕ್ಷರು ಗ್ರಾಮ ಪಂಚಾಯಿತಿ, ಶ್ರೀ ಟಿ.ಎಸ್. ಶಿವಪ್ರಸಾದ್ ಖಜಾಂಚಿಗಳು ಕ.ವಿ.ಸಂ., ಶ್ರೀ ಜಿ.ಪಿ. ದೀಪಕ್ ಉಪಾಧ್ಯಕ್ಷರು ಕ.ವಿ.ಸಂ, ಶ್ರೀ ಹೆಚ್.ಜಿ. ಸುಧಾಕರ್ ಕಾರ್ಯದರ್ಶಿಗಳು ಕ.ವಿ.ಸಂ, ಶ್ರೀ ರಂಗಪ್ಪನವರು, ಶ್ರೀ ಚಿದಾನಂದ್‌ರವರು ಆಗಮಿಸಿದ್ದರು. ಶಿಬಿರದಲ್ಲಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಗೆ ಹೊಸ ವೇದಿಕೆಯನ್ನು ನಿರ್ಮಾಣ

ಮಾಡಲಾಯಿತು. ಸುಮಾರು 150 ವಿವಿಧ ಸಸಿಗಳನ್ನು ಸಾರ್ವಜನಿಕ ಮೈದಾನದಲ್ಲಿ ನೆಡೆಸಲಾಯಿತು. ಪುರಾತನ ಕಾಲದ ಕಲ್ಯಾಣಿಯನ್ನು ಸ್ವಚ್ಛಗೊಳಿಸಲಾಯಿತು. ಏಳು ದಿನದ ಶಿಬಿರಕ್ಕೆ ವಿಶೇಷ ಆಹ್ವಾನಿತರಾಗಿ ಶ್ರೀ ಚೇತನ್ ಆರ್ ಆಯುಕ್ತರು ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಗಮಿಸಿದ್ದರು.

ಗ್ರಾಮಸ್ಥರಿಗಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮಗಳಾದ ಕಾನೂನು ಅರಿವು, ಅಂತರ್ಜಲ ಸದ್ಬಳಕೆ, ಗ್ರಾಮೀಣ ಪ್ರತಿಭೆಗಳ ಮುಂದಿರುವ ಸವಾಲುಗಳು, ನೆಮ್ಮದಿಯ ಜೀವನಕ್ಕೆ ಆರೋಗ್ಯ, ಗ್ರಾಮೀಣಾಭಿವೃದ್ಧಿಯಲ್ಲಿ ಕೃಷಿಯ ಮಹತ್ವ, ಭಾರತೀಯ ಸಂಸ್ಕೃತಿ, ಜನಪದ ಜೀವನ ಮುಂತಾದ ವಿಷಯಗಳ ಬಗ್ಗೆ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಗ್ರಾಮಸ್ಥರಿಗೆ ಉಚಿತ ನೇತ್ರ ತಪಾಸಣೆ, ಉಚಿತ ಆರೋಗ್ಯ ತಪಾಸಣೆ, ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ, ಜಾನುವಾರುಗಳಿಗೆ ಉಚಿತ ಲಸಿಕೆ ಮುಂತಾದ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳು ಗ್ರಾಮಸ್ಥರ ಮನಸೂರೆಗೊಂಡವು. ಗ್ರಾಮಸ್ಥರು ಅತ್ಯಂತ ತುಂಬು ಹೃದಯದ ಸಹಕಾರ ನೀಡಿದರು. .

**–ಪ್ರೊ. ಸಿ.ಎಂ.ಎಸ್. ಲೋಕೇಶ್ವರಯ್ಯ**
**–ಪ್ರೊ. ಬಿ. ಶ್ರೀನಿವಾಸ್**
**–ಪ್ರೊ. ಎಂ.ಸಿ. ಯೋಗಾನಂದ್**
ಕಾರ್ಯಕ್ರಮಾಧಿಕಾರಿಗಳು
ರಾಷ್ಟ್ರೀಯ ಸೇವಾ ಯೋಜನೆ ಘಟಕ

## ನುಡಿ ಮುತ್ತುಗಳು

**ನಿಮ್ಮನ್ನು ನಿರ್ಲಕ್ಷಿಸುವವರು ಎಂತಹ ಮಹಾನ್ ವ್ಯಕ್ತಿಗಳಾದರು ಪರವಾಗಿಲ್ಲ, ಅವರಿಂದ ದೂರವಿರಿ.**
**ನಿಮಗೆ ಬೆಲೆ ಕೊಡುವವರು ಸಾಮಾನ್ಯ ವ್ಯಕ್ತಿಗಳಾದರೂ ಪರವಾಗಿಲ್ಲ, ಅವರನ್ನು ಗೌರವಿಸಿ.**

**ದುಡ್ಡಿಲ್ಲದವ ಬಡವನಲ್ಲ, ಗುರಿ ಮತ್ತು ಕನಸು ಇಲ್ಲದವನು ನಿಜವಾದ ಬಡವ.**
**ತುಳಿದು ಬೆಳೆಯುವುದು ಗೆಲುವಲ್ಲ. ಬೆಳೆದು ಬೆಳೆಸುವುದು ಗೆಲುವು.**
**ಸಕ್ಕರೆ ಸಹವಾಸ ಮಾಡಿ ಹಾಲು ಸಿಹಿಯಾಗುತ್ತದೆ.**
**ಹುಳಿಯ ಸಹವಾಸ ಮಾಡಿ ಹಾಲು ಒಡೆದುಹೋಗುತ್ತದೆ...**
**ಅದೇ ರೀತಿ ಬದುಕು ಒಳ್ಳೆಯವರ ಸಹವಾಸ ಮಾಡಿದರೆ ಜೀವನ ಸುಖಮಯವಾಗುತ್ತದೆ.**
**ಕೆಟ್ಟವರ ಸಹವಾಸ ಮಾಡಿದರೆ ಜೀವನ ಒಡೆದು ಹೋಗುತ್ತದೆ.**

**ಅತಿ ದೊಡ್ಡ ಸಂಪತ್ತು ಎಂದರೆ ಬುದ್ಧಿವಂತಿಕೆ ಬಲವಾದ ಆಯುಧವೆಂದರೆ ತಾಳ್ಮೆ**
**ಅತ್ಯಂತ ಒಳ್ಳೆಯ ಔಷಧ ಎಂದರೆ ನಗು,**
**ವಿಸ್ಮಯವೆಂದರೆ ಇವೆಲ್ಲವೂ ಪ್ರಪಂಚದಲ್ಲಿ ದುಡ್ಡಿಲ್ಲದೆ ಸುಲಭವಾಗಿ ಸಿಗುವಂಥಹುದು.**

# 2024-2025 ನೇ ಸಾಲಿನ ಯುವ ರೆಡ್‌ಕ್ರಾಸ್ ಘಟಕದ ವರದಿ

ಭಾರತೀಯ ಯುವ ರೆಡ್ ಕ್ರಾಸ್ ಸಂಸ್ಥೆಯು ಅಂತರರಾಷ್ಟ್ರೀಯ ಮಾನವೀಯ ಸೇವಾ ಸಂಸ್ಥೆಯಾಗಿದ್ದು, 1828 ರ ಮೇ 8 ರಂದು ಸ್ವಿಡ್ಜರ್ಲೆಂಡಿನ ಜಿನೀವಾದಲ್ಲಿ ಜನಿಸಿದ ಜೀನ್ ಹೆನ್ರಿ ಡ್ಯೂನಾಂಟ್ ರವರು ಈ ಸಂಸ್ಥೆಯ ಜನಕರಾಗಿರುತ್ತಾರೆ. 1859 ರಲ್ಲಿ ಇಟಲಿ, ಫ್ರಾನ್ಸ್ ಹಾಗೂ ಆಸ್ಟ್ರಿಯ ನಡುವೆ ನಡೆದ ಯುದ್ಧದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲು 1863 ರಲ್ಲಿ ರೆಡ್‌ಕ್ರಾಸ್ ಸಂಸ್ಥೆ ಉಗಮವಾಯಿತು. ಇವರ ಜನ್ಮದಿನವನ್ನೇ ವಿಶ್ವ ರೆಡ್ ಕ್ರಾಸ್ ದಿನವನ್ನಾಗಿ ಆಚರಿಸಲಾಗುತ್ತಿದೆ. ಯುದ್ಧದ ಸಮಯದಲ್ಲಿ ಗಾಯಗೊಂಡ ಜನರ ಸಂಕಟವನ್ನು ನಿವಾರಿಸಲು ಹುಟ್ಟಿಕೊಂಡ ಈ ಸಂಸ್ಥೆಯು ಕಾಲಕ್ರಮೇಣ ಪ್ರಕೃತಿ ವಿಕೋಪ ಮತ್ತು ಶಾಂತಿಯ ಸಮಯದಲ್ಲಿ ಸಂಕಷ್ಟಗಳನ್ನು ನಿಯಂತ್ರಿಸುವ ತನ್ನ ವ್ಯಾಪ್ತಿಯನ್ನು ವಿಸ್ತೃತಗೊಳಿಸಿತು.

ಗಾಯಾಳು ಸೈನಿಕರ ಸಹಕಾರ ಸಂಸ್ಥೆಯಾಗಿ ಉಗಮಗೊಂಡ ಈ ಸಂಸ್ಥೆಯು ನಂತರ ರೆಡ್ ಕ್ರಾಸ್ ಸಂಸ್ಥೆಯಾಗಿ ರೂಪುಗೊಂಡು 1880ರಲ್ಲಿ ಅಂತರರಾಷ್ಟ್ರೀಯ ರೆಡ್ ಕ್ರಾಸ್ (Indian Red Cross Society) ಎಂದಾಯಿತು. ಸ್ವಿಸ್‌ನ ಜಿನೀವಾದಲ್ಲಿ ಇದರ ಕೇಂದ್ರ ಕಛೇರಿಯಿದ್ದು ಸರ್ಕಾರೇತರ, ರಾಜಕೀಯ, ಧಾರ್ಮಿಕೇತರ, ಖಾಸಗಿ ಧರ್ಮಾರ್ಥ ಸಂಸ್ಥೆಯಾಗಿದ್ದು ಮಾನವೀಯ ಸೇವಾ ಸಂಘಟನೆಯಾಗಿದೆ. ಅಂತೆಯೇ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಯುದ್ಧ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ, ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರ ಕಾರ್ಯ ಹಾಗೂ ಶುಶ್ರೂಷೆ ಮಾಡುವ ಮಾನವೀಯ ಉದ್ದೇಶವನ್ನಿಟ್ಟುಕೊಂಡು ನಮ್ಮ ದೇಶದಲ್ಲಿ 1920ರಲ್ಲಿ ಸ್ಥಾಪನೆಯಾಯಿತು. ಅಂದಿನಿಂದಲೇ ಕರ್ನಾಟಕದಲ್ಲೂ ಅಸ್ತಿತ್ವಕ್ಕೆ ಬಂದಿದ್ದು ಗೌರವಾನ್ವಿತ ರಾಷ್ಟ್ರಪತಿಯವರು ಕೇಂದ್ರ ಸಂಸ್ಥೆಯ ಅಧ್ಯಕ್ಷರಾಗಿದ್ದು, ಕರ್ನಾಟಕ ಶಾಖೆಗೆ ಘನತೆವೆತ್ತ ರಾಜ್ಯಪಾಲರು ಅಧ್ಯಕ್ಷರಾಗಿದ್ದು, ಕಾಲೇಜಿನ ಘಟಕಕ್ಕೆ ಪ್ರಾಂಶುಪಾಲರು ಅಧ್ಯಕ್ಷರಾಗಿರುತ್ತಾರೆ. 1901ರಲ್ಲಿ ಹೆನ್ರಿ ಡ್ಯೂನಾಂಟ್ ಧ್ಯೆಯೋದ್ದೇಶಗಳ ಸಾಧನೆಗಾಗಿ ವಿಶ್ವದ ಅತ್ಯುನ್ನತ ಗೌರವವಾದ ನೊಬೆಲ್ ಶಾಂತಿ ಪುರಸ್ಕಾರವನ್ನು ಪ್ರಥಮವಾಗಿ ನೀಡಲಾಗಿದೆ.

**ಈ ಸಂಸ್ಥೆಯು ಕೆಳಗಿನ ಧ್ಯೇಯೋದ್ದೇಶಗಳನ್ನಿಟ್ಟುಕೊಂಡಿದೆ :**

1. ಭೂಕಂಪ, ಪ್ರವಾಹ, ಅಗ್ನಿ ದುರಂತ ಅಪಘಾತಗಳು ಸಂಭವಿಸಿದಾಗ ಪರಿಹಾರ ಕಾರ್ಯ ಮತ್ತು ಶುಶ್ರೂಷೆ ಮಾಡಿ ಔಷಧಿ ಹಾಗೂ ಅಗತ್ಯ ಸಾಮಗ್ರಿಗಳನ್ನು ನೀಡುವುದು.
2. ಆರೋಗ್ಯದ ಬಗ್ಗೆ ಅರಿವು ಮತ್ತು ಶಿಕ್ಷಣ ನೀಡುವುದು.
3. ಹಿಂದುಳಿದ ಹಾಗೂ ಬಡಕುಟುಂಬದ ಅಂಗವಿಕಲರಿಗೆ ತ್ರಿಚಕ್ರ ವಾಹನ, ಗಾಲಿ ಕುರ್ಚಿ, ಶ್ರವಣ ಸಾಧನ, ಬೆತ್ತದ ಸಾಧನ ಒದಗಿಸುವುದು.

4. ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ನೀಡುವುದು.
5. ರಕ್ತ ನಿಧಿಗಳನ್ನು ಸ್ಥಾಪಿಸಿ ಬಡ ಹಾಗೂ ಅಗತ್ಯವಿರುವ ರೋಗಿಗಳಿಗೆ ಉಚಿತವಾಗಿ ನೀಡುವುದು.
6. ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವುದು.
7. ಮಾದಕ ವಸ್ತುಗಳ ತಡೆ ಮತ್ತು ಸಾಕ್ಷರತೆಯ ಅರಿವು ಮೂಡಿಸುವುದು.
8. ಪಲ್ಸ್ ಪೋಲಿಯೋ ಹಾಗೂ ಆರೋಗ್ಯ ತಪಾಸಣೆಯಲ್ಲಿ ಪಾಲ್ಗೊಳ್ಳುವುದು.
9. ಗರ್ಭಿಣಿ ಸ್ತ್ರೀಯರ ಆರೋಗ್ಯ ಹಾಗೂ ಸುರಕ್ಷತಾ ಹೆರಿಗೆ ಮತ್ತು ಹೆಚ್.ಐ.ವಿ. ಏಡ್ಸ್ ರೋಗದಿಂದ ಜಾಗರೂಕರಾಗಿರಲು ತಿಳುವಳಿಕೆ ನೀಡುವುದು.
10. ಹೆಣ್ಣು ಶಿಶು ದಿನಾಚರಣೆ, ಮಕ್ಕಳ ದಿನಾಚರಣೆ ಹಾಗೂ ಅಂತರರಾಷ್ಟೀಯ ಮಹಿಳಾ ದಿನಾಚರಣೆಗಳನ್ನು ಆಚರಿಸುವುದು.

ಈ ರೀತಿಯಾದ ಮಾನವೀಯ ಸೇವಾ ಗುಣಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸುವ ಉದ್ದೇಶದಿಂದ ಸರ್ಕಾರಿ ಆದೇಶದಂತೆ ನಮ್ಮ ಕಾಲೇಜಿನಲ್ಲಿ ದಿನಾಂಕ 31–1–2013 ರಂದು ಯುವ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಲಾಗಿದೆ.

**2024–2025ನೇ ಸಾಲಿನಲ್ಲಿ ನಡೆಸಲಾದ ಕಾರ್ಯಕ್ರಮಗಳು:**

**ದಿನಾಂಕ 09.02.2024ರಂದು** ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ ತಿಪಟೂರು ರೋಟರಿ ಕ್ಲಬ್ ಮತ್ತು ಶಿವಮೊಗ್ಗ ಮಿಡ್ ಟೌನ್ ಫೌಂಡೇಶ್‌ನ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ರಕ್ತದಾನದ ಮಹತ್ವವನ್ನು ಕುರಿತು ಜಾಗೃತಿ ಮೂಡಿಸಲಾಯಿತು.

**ದಿನಾಂಕ 19.12.2024ರಂದು** ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ ತಿಪಟೂರು ರೋಟರಿ ಕ್ಲಬ್ ಮತ್ತು ಶಿವಮೊಗ್ಗದ ಮಿಡ್ ಟೌನ್ ರೋಟರಿ ಫೌಂಡೇಶನ್‌ನ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಲಾಗಿದ್ದು ಉಚಿತ ವೈದ್ಯಕೀಯ ತಪಾಸಣೆ ಮತ್ತು ರಕ್ತದಾನ ಶಿಬಿರದಲ್ಲಿ ನಮ್ಮ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು 70 ಯುನಿಟ್ ರಕ್ತದಾನ ಮಾಡಿರುತ್ತಾರೆ.

ಈ ಎಲ್ಲಾ ಕಾರ್ಯಕ್ರಮಗಳನ್ನು ನಡೆಸಲು ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**– ಡಾ. ರೇಣುಕಾ ಡಿ.**

ನೋಡಲ್ ಅಧಿಕಾರಿಗಳು

# ಕ್ರೀಡಾ ವರದಿ 2024-2025

ದಿನಾಂಕ:23–10–2024 ರಂದು ಪ್ರಾಂಶುಪಾಲರಾದ ಡಾ. ಜಿ. ಎನ್.ಉಮೇಶ್ ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಕ್ರೀಡಾ ಸಮಿತಿಯನ್ನು ರಚಿಸಲಾಯಿತು.

**ಕ್ರೀಡಾ ಸಮಿತಿ:**

ಅಧ್ಯಕ್ಷರು : ಡಾ. ಜಿ.ಎನ್.ಉಮೇಶ್, ಪ್ರಾಂಶುಪಾಲರು.
ಕ್ರೀಡಾ ಕಾರ್ಯದರ್ಶಿ : ಶ್ರೀನಿವಾಸ. ಬಿ., ದೈಹಿಕ ಶಿಕ್ಷಣ ನಿರ್ದೇಶಕರು.

ಸದಸ್ಯರುಗಳು :

- ಪ್ರೊ. ಲೋಕೇಶ್ವರಯ್ಯ. ಸಿ.ಎಂ.ಎಸ್., ಮುಖ್ಯಸ್ಥರು, ಇಂಗ್ಲಿಷ್ ವಿಭಾಗ.
- ಪ್ರೊ. ಮಲ್ಲಿಕಾರ್ಜುನ ಪ್ರಸನ್ನ.ಎಸ್.ಎಸ್., ಮುಖ್ಯಸ್ಥರು,ವಾಣಿಜ್ಯಶಾಸ್ತ್ರ ವಿಭಾಗ.
- ಪ್ರೊ. ಸತೀಶ್ಚಂದ್ರ. ಎ.ಎಂ.,ಮನಃಶಾಸ್ತ್ರ ವಿಭಾಗ.
- ಪ್ರೊ. ಡಾ.ಲಲಟಾಕ್ಷಮೂರ್ತಿ.ಜಿ.ಎಂ., ಮುಖ್ಯಸ್ಥರು,ಇತಿಹಾಸ ವಿಭಾಗ.
- ಡಾ. ರೇಣುಕಾ. ಡಿ., ಮುಖ್ಯಸ್ಥರು, ಕನ್ನಡ ವಿಭಾಗ.
- ಪ್ರೊ. ಕಾಂತರಾಜು. ಎ.ಎಂ.,ಮುಖ್ಯಸ್ಥರು, ಭೂಗೋಳಶಾಸ್ತ್ರ ವಿಭಾಗ.
- ಪ್ರೊ. ಯೋಗಾನಂದ.ಎಂ. ಸಿ., ಮುಖ್ಯಸ್ಥರು,ಅರ್ಥಶಾಸ್ತ್ರ ವಿಭಾಗ.
- ಪ್ರೊ. ಭರತ್. ಆರ್. ಆರ್., ಮುಖ್ಯಸ್ಥರು,ಸಮಾಜಶಾಸ್ತ್ರ ವಿಭಾಗ.
- ಪ್ರೊ. ರೇಣು.ಎಂ.ಎನ್., ವಾಣಿಜ್ಯಶಾಸ್ತ್ರ ವಿಭಾಗ.
- ಪ್ರೊ. ಜ್ಯೋತಿ. ಜಿ., ವಾಣಿಜ್ಯಶಾಸ್ತ್ರ ವಿಭಾಗ.
- ಕು. ಮಮತಾ.ಎನ್.ಡಿ., ಅಂತಿಮ ಬಿ. ಎ.ವಿದ್ಯಾರ್ಥಿ.
- ಕು. ಚಂದ್ರಮೌಳಿ. ಬಿ., ಅಂತಿಮ ಬಿ. ಕಾಂ.ವಿದ್ಯಾರ್ಥಿ.

**ರಾಷ್ಟ್ರ ಮಟ್ಟದ ವಿವಿಧ ಕ್ರೀಡೆಗಳಲ್ಲಿ ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ ಆಟಗಾರರ ವಿವರ:**

- ಕು.ವಿಷ್ಣುವರ್ಧನರಾವ್.ಎಂ.,ಪ್ರಥಮ ಬಿ. ಕಾಂ. ಇವರು ದಿನಾಂಕ 06–11–2024 ರಿಂದ 09–11–2024 ರ ವರೆಗೂ ಅಮೃತಸರದ ಗುರುನಾನಕ್ ದೇವ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಟೇಕ್ವಾಂಡೋ ಸ್ಪರ್ಧೆಯಲ್ಲಿ ತುಮಕೂರು ವಿ. ವಿ.ಯನ್ನು ಪ್ರತಿನಿಧಿಸಿರುತ್ತಾರೆ.
- ಕು. ಅಮೃತ.ಜಿ.ಎನ್.,ಪ್ರಥಮ ಬಿ. ಕಾಂ. ಇವರು ದಿನಾಂಕ 29–11–2024 ರಿಂದ 02–12–2024 ರ ವರೆಗೂ ತಮಿಳುನಾಡಿನ ಅಲಗಪ್ಪ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಷ್ಟ್ರ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ತುಮಕೂರು ವಿ. ವಿ.ಯನ್ನು ಪ್ರತಿನಿಧಿಸಿರುತ್ತಾರೆ.
- ಕು. ಶ್ರೀವತ್ಸ.ಎನ್.ಎಸ್.,ತೃತೀಯ ಬಿ. ಎ. ಇವರು ದಿನಾಂಕ 18–12–2024 ರಿಂದ 22–12–2024 ರ ವರೆಗೂ ಕೇರಳದ ಕೇರಳ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಷ್ಟ್ರ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ತುಮಕೂರು ವಿ.ವಿ.ಯನ್ನು ಪ್ರತಿನಿಧಿಸಿರುತ್ತಾರೆ.
- ಕು. ಶಶಾಂಕ್ ವರ್ಮ. ಎಸ್.,ದ್ವಿತೀಯ ಬಿ . ಎ. ಇವರು ದಿನಾಂಕ 26–12–2024 ರಿಂದ 30–12–2024 ರ ವರೆಗೂ ಭುವನೇಶ್ವರದ ಕಳಿಂಗ ವಿಶ್ವವಿದ್ಯಾನಿಲಯದಲ್ಲಿ ನಡೆದ ಅಖಿಲ ಭಾರತ ಅಥ್ಲೆಟಿಕ್ಸ್ ಕ್ರೀಡಾಕೂಟದ 100 ಮೀ ,200 ಮೀ, ಹಾಗೂ 4x100 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ತುಮಕೂರು ವಿ. ವಿ.ಯನ್ನು ಪ್ರತಿನಿಧಿಸಿರುತ್ತಾರೆ.
- ಕು. ದೀಪಕ್. ಬಿ. ವೈ., ದ್ವಿತೀಯ ಬಿ. ಎ. ಇವರು ದಿನಾಂಕ 26–12–2024 ರಿಂದ 30–12–2024 ರ ವರೆಗೂ ಭುವನೇಶ್ವರದ ಕಳಿಂಗ ವಿಶ್ವವಿದ್ಯಾನಿಲಯದಲ್ಲಿ ನಡೆದ ಅಖಿಲ ಭಾರತ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ತುಮಕೂರು ವಿ.ವಿ.ಯನ್ನು ಪ್ರತಿನಿಧಿಸಿರುತ್ತಾರೆ.
- ಕು. ಬಾಬು. ಬಿ.ಜಿ., ಪ್ರಥಮ ಬಿ. ಎ. ಇವರು ದಿನಾಂಕ 26–12–2024 ರಿಂದ 30–12–2024 ರ ವರೆಗೂ ಭುವನೇಶ್ವರದ ಕಳಿಂಗ ವಿ.ವಿ.ಯಲ್ಲಿ ನಡೆದ ಅಖಿಲ ಭಾರತ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ತುಮಕೂರು ವಿ.ವಿ.ಯನ್ನು ಪ್ರತಿನಿಧಿಸಿರುತ್ತಾರೆ.

● ಕು. ಯಾಸೀನ್.ಸಿ.ಜಿ., ಪ್ರಥಮ ಬಿ. ಎ. ಇವರು ದಿನಾಂಕ 26-12-2024 ರಿಂದ 30-12-2024 ರ ವರೆಗೂ ಭುವನೇಶ್ವರದ ಕಳಿಂಗ ವಿ.ವಿ.ಯಲ್ಲಿ ನಡೆದ ಅಖಿಲ ಭಾರತ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ತುಮಕೂರು ವಿ.ವಿ.ಯನ್ನು ಪ್ರತಿನಿಧಿಸಿರುತ್ತಾರೆ.

●ಕು. ದೀಪಕ್. ಬಿ ವೈ., ದ್ವಿತೀಯ ಬಿ. ಎ. ಇವರು ದಿನಾಂಕ 16-01-2025 ರಿಂದ 21-01-2025 ರವರೆಗೂ ತಮಿಳುನಾಡಿನ ಮದರಾಸು ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಷ್ಟ್ರ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ತುಮಕೂರು ವಿ. ವಿ.ಯನ್ನು ಪ್ರತಿನಿಧಿಸಿರುತ್ತಾರೆ.

●ಕು. ಲಿಖಿತ್ ಗೌಡ. ಎಸ್. ವೈ., ಪ್ರಥಮ ಬಿ. ಬಿ. ಎ. ಇವರು ದಿನಾಂಕ 28-02-2025 ರಿಂದ 01-03-2025 ರ ವರೆಗೂ ತಮಿಳುನಾಡಿನ ಪೆರಿಯಾರ್ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಷ್ಟ್ರ ಮಟ್ಟದ ಹ್ಯಾಂಡ್ ಬಾಲ್ ಪಂದ್ಯಾವಳಿಯಲ್ಲಿ ತುಮಕೂರು ವಿ.ವಿ.ಯನ್ನು ಪ್ರತಿನಿಧಿಸಿರುತ್ತಾರೆ.

● ಕು. ಚಂದನ್ ಮಳವಾಡಿ. ಬಿ. ಎಸ್., ಪ್ರಥಮ ಬಿ.ಬಿ.ಎ. ಇವರು ದಿನಾಂಕ 28-02-2025 ರಿಂದ 01-03-2025 ರ ವರೆಗೂ ತಮಿಳುನಾಡಿನ ಪೆರಿಯಾರ್ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಷ್ಟ್ರ ಮಟ್ಟದ ಹ್ಯಾಂಡ್ ಬಾಲ್ ಪಂದ್ಯಾವಳಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುತ್ತಾರೆ.

●ಕು. ಕಿಶನ್ ಕುಮಾರ್, ಪ್ರಥಮ ಬಿ. ಎ. ಇವರು ದಿನಾಂಕ 14-03-2025 ರಿಂದ 17-03-2025 ರ ವರೆಗೂ ಕರ್ನಾಟಕದ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದಲ್ಲಿ ನಡೆದ ಅಖಿಲ ಭಾರತ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುತ್ತಾರೆ.

**ಅಂತರ ಕಾಲೇಜು ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ವಿಜೇತ ವಿದ್ಯಾರ್ಥಿಗಳ ವಿವರ:**

ದಿನಾಂಕ 08-12-2024 ರಿಂದ 09-12-2024 ರವರೆಗೂ ತುಮಕೂರಿನ ಮಹಾತ್ಮಾಗಾಂಧಿ ಕ್ರೀಡಾಂಗಣದಲ್ಲಿ ನಡೆದ ತುಮಕೂರು ವಿಶ್ವವಿದ್ಯಾನಿಲಯದ ಪುರುಷ ಮತ್ತು ಮಹಿಳೆಯರ ಅಂತರ ಕಾಲೇಜು ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳ ವಿವರ ಈ ಕೆಳಗಿನಂತಿದೆ.

●ಶಶಾಂಕ್ ವರ್ಮ. ಎಸ್., ದ್ವಿತೀಯ ಬಿ. ಎ. ಇವರು 100 ಮೀ.ಓಟ, 200 ಮೀ.ಓಟ ಹಾಗೂ 4x100 ಮೀ. ರಿಲೇ ಓಟದಲ್ಲಿ ಕ್ರಮವಾಗಿ 03 ಚಿನ್ನದ ಪದಕಗಳನ್ನು ಪಡೆದು, ವೈಯಕ್ತಿಕ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್ ಪ್ರಶಸ್ತಿಯನ್ನು ಪಡೆದಿರುತ್ತಾರೆ.

● ಮೌಲ್ಯ, ದ್ವಿತೀಯ ಬಿ.ಕಾಂ. ಇವರು 4x400 ಮೀ. ರಿಲೇ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ,ಉದ್ದ ಜಿಗಿತ ಮತ್ತು 110 ಮೀ. ಅಡೆ ತಡೆ ಓಟದ ಸ್ಪರ್ದೆಯಲ್ಲಿ ಕ್ರಮವಾಗಿ 02 ಬೆಳ್ಳಿ ಪದಕ ಹಾಗೂ 400 ಮೀ.ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕಗಳನ್ನು ಪಡೆದಿರುತ್ತಾರೆ.

● ಬಾಬು. ಬಿ.ಜಿ., ಪ್ರಥಮ ಬಿ. ಎ. ಇವರು 4x100 ಮೀ. ರಿಲೇ ಓಟ ಹಾಗೂ 4x400 ಮೀ. ರಿಲೇ ಓಟದ ಸ್ಪರ್ಧೆಯಲ್ಲಿ ಕ್ರಮವಾಗಿ 02 ಚಿನ್ನದ ಪದಕಗಳು ಮತ್ತು 200 ಮೀ.ಓಟದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಹಾಗೂ 100 ಮೀ.ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.

● ದೀಪಕ್. ಬಿ. ವೈ., ದ್ವಿತೀಯ ಬಿ. ಎ. ಇವರು 4x100 ಮೀ.ರಿಲೇ ಓಟ ಹಾಗೂ 4x400 ಮೀ. ರಿಲೇ ಓಟದ ಸ್ಪರ್ಧೆಯಲ್ಲಿ ಕ್ರಮವಾಗಿ 02 ಚಿನ್ನದ ಪದಕಗಳನ್ನು ಪಡೆದಿರುತ್ತಾರೆ.

●ಮಮತಾ. ಎನ್. ಡಿ., ತೃತೀಯ ಬಿ.ಎ. ಇವರು ಜಾವಲಿನ್ ಎಸೆತದ ಸ್ಪರ್ಧೆಯಲ್ಲಿ ಚಿನ್ನದ ಪದಕ, ಚಕ್ರ ಎಸೆತದ ಸ್ಪರ್ಧೆಯಲ್ಲಿ ಕಂಚಿನ ಪದಕ ಹಾಗೂ 4x100 ಮೀ.ರಿಲೇ ಓಟದ ಸ್ಪರ್ದೆಯಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.

●ಚೇತನ್.ಎನ್., ಪ್ರಥಮ ಬಿ.ಕಾಂ. ಇವರು 4x400 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

●ಯಾಸೀನ್.ಸಿ.ಜಿ., ಪ್ರಥಮ ಬಿ. ಎ. ಇವರು 4x100 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

●ಚಂದ್ರಮೌಳಿ. ಬಿ., ತೃತೀಯ ಬಿ. ಕಾಂ. ಇವರು ಚಕ್ರ ಎಸೆತ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.

● ಸಾನಿಯಾ ಶಫಿ. ದ್ವಿತೀಯ ಬಿ. ಕಾಂ. ಇವರು 4x 100 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.
● ಯಶಸ್ವಿನಿ. ಸಿ.ಜೆ., ಪ್ರಥಮ ಬಿ. ಎ. ಇವರು 4x100 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.
● ಸ್ನೇಹ. ಕೆ.ಪಿ., ಪ್ರಥಮ ಬಿ.ಕಾಂ. ಇವರು 4x100 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.
● ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ನಮ್ಮ ವಿದ್ಯಾರ್ಥಿಗಳು 11 ಚಿನ್ನ , 03 ಬೆಳ್ಳಿ ಹಾಗೂ 08 ಕಂಚಿನ ಪದಕ. ಒಟ್ಟು 22 ಪದಕಗಳನ್ನು ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ.
● ದಿನಾಂಕ 13–11–2024 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ. ಇಲ್ಲಿ ನಡೆದ ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಕು. ಸೃಜನ್. ಬಿ.ಎಸ್., ದ್ವಿತೀಯ ಬಿ.ಕಾಂ. ಇವರು ಪ್ರಥಮ ಸ್ಥಾನ ಪಡೆದಿರುತ್ತಾರೆ.
● ದಿನಾಂಕ 16–04–2025 ರಂದು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಅಂತರ ಕಾಲೇಜು ಪುರುಷರ ಟೇಕ್ವಾಂಡೋ ಸ್ಪರ್ಧೆಯಲ್ಲಿ ವಿಷ್ಣುವರ್ಧನ್ ರಾವ್.ಎಂ., ಪ್ರಥಮ ಬಿ.ಕಾಂ. ಇವರು 55 ಕೆಜಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.
● ದಿನಾಂಕ 27–06–2025 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ. ಇಲ್ಲಿ ನಡೆದ ತುಮಕೂರು ವಿಶ್ವವಿದ್ಯಾನಿಲಯ ಪುರುಷರ ಅಂತರ ಕಾಲೇಜು ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೊಹಮ್ಮದ್ ಬಿಲಾಲ್ ಕಲಂದರ್, ಪ್ರಥಮ ಬಿ. ಎ., ರಾಘವೇಂದ್ರ.ವಿ., ಪ್ರಥಮ ಬಿ. ಎ., ತರುಣ್.ಎಸ್.ಎಸ್.ದ್ವಿತೀಯ ಎಂ.ಕಾಂ.,ರಕ್ಷಿತ್ ಬಿ. ಎಸ್. ದ್ವಿತೀಯ ಎಂ.ಕಾಂ., ಗಿರೀಶ್ ಕೆ.ಎಂ. ದ್ವಿತೀಯ ಎಂ.ಕಾಂ. ಇವರು ದ್ವಿತೀಯ ಸ್ಥಾನ ಪಡೆದಿರುತ್ತಾರೆ.

*ಅಂತರ ಕಾಲೇಜು ಅಥ್ಲೆಟಿಕ್ಸ್ ಕ್ರೀಡಾಕೂಟದ ವೈಯಕ್ತಿಕ ವೀರಾಗ್ರಣಿ ಪ್ರಶಸ್ತಿ ಪುರಸ್ಕೃತರು: ಶಶಾಂಕ್ ವರ್ಮ.ಎಸ್., ದ್ವಿತೀಯ ಬಿ.ಎ.
*ಕಾಲೇಜು ವಾರ್ಷಿಕ ಅಥ್ಲೆಟಿಕ್ಸ್ ಕ್ರೀಡಾಕೂಟದ ವೈಯಕ್ತಿಕ ವೀರಾಗ್ರಣಿ ಪ್ರಶಸ್ತಿ ಪುರಸ್ಕೃತರು: ಮೌಲ, ದ್ವಿತೀಯ ಬಿ.ಕಾಂ.
*ವಿದ್ಯಾಭ್ಯಾಸ ಮುಗಿಸಿ ಕಾಲೇಜಿನಿಂದ ಹೊರ ಹೋಗುತ್ತಿರುವ ಉತ್ತಮ ಕ್ರೀಡಾಪಟು ಪ್ರಶಸ್ತಿ ಪುರಸ್ಕೃತರು: ಶ್ರೀವತ್ಸ. ಎನ್.ಎಸ್., ತೃತೀಯ ಬಿ. ಎ.

ಹೀಗೆ ಕಾಲೇಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ವಿವಿಧ ಕ್ರೀಡೆಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆಂದರೆ ಅದಕ್ಕೆ ಮುಖ್ಯ ಕಾರಣ ಕಲ್ಪತರು ವಿದ್ಯಾಸಂಸ್ಥೆ. ಪ್ರತಿ ವರ್ಷ ಕಾಲೇಜಿನಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಆರ್ಥಿಕ ನೆರವಿನೊಂದಿಗೆ ಪ್ರತಿಭಾ ಪುರಸ್ಕಾರ ನೀಡಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಾ ಬಂದಿರುವ ನಮ್ಮ ಕಲ್ಪತರು ವಿದ್ಯಾ ಸಂಸ್ಥೆಗೆ ಕಾಲೇಜು ಕ್ರೀಡಾ ಸಮಿತಿಯ ಪರವಾಗಿ ಅನಂತ ಅನಂತ ಧನ್ಯವಾದಗಳು.

**" ದೇಹವನ್ನು ದಂಡಿಸು ದೇವರನ್ನು ಕಾಣುವೆ "**

**–ಪ್ರೊ ಬಿ.ಶ್ರೀನಿವಾಸ್**
ದೈಹಿಕ ಶಿಕ್ಷಣ ನಿರ್ದೇಶಕರು

**ಅವಕಾಶಗಳ ಬಗ್ಗೆ. ಸತತ ಪ್ರಯತ್ನ ಜಾರಿಯಲ್ಲಿರಲಿ !**
**ಸಾಧನೆ ಮಾಡಲೇಬೇಕು ಅಂತ ಏನಿಲ್ಲ, ಸರಳತೆಯಿಂದ ಇದ್ದು ಒಳ್ಳೆಯದನ್ನು ಮಾಡ್ತಾ ಹೋದರೆ ಅದೇ ಒಂದು ದೊಡ್ಡ ಸಾಧನೆ.**

**ಗೆದ್ದವನು ಸೋತವನನ್ನು ನೋಡಿ ಅಹಂಕಾರದಿಂದ ನಗುತ್ತಿರುತ್ತಾನೆ. ಆದರೆ ಅವನಿಗೇ ಅರಿವಾಗಲಿಲ್ಲ? ಅವನು ಸೋತಿದ್ದಕ್ಕೆ ನಾನು ಇವತ್ತು ಗೆದ್ದೆ ಎಂದು.**

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

2024–25 ನೇ ಸಾಲಿನಲ್ಲಿ ನಡೆದ ಕಾರ್ಯಕ್ರಮಗಳ ವರದಿ ಈ ಕೆಳಕಂಡಂತಿದೆ.

ದಿನಾಂಕ 23.5.2024ರಂದು ವಿಶ್ವ ಋತು ನೈರ್ಮಲ್ಯ ದಿನಾಚರಣೆಯಂದು ಡಾ॥ ಪಲ್ಲವಿ ಸ್ತ್ರೀರೋಗ ತಜ್ಞರು, ಸಾರ್ವಜನಿಕ ಆರ್ಯೋಗ ಇಲಾಖೆ, ತಿಪಟೂರು ಇವರು ಅಗಮಿಸಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಋತು ನೈರ್ಮಲ್ಯದ ಅರಿವನ್ನು ಮೂಡಿಸಿದರು. 30.7.24ರಂದು ರೇಜಂರ್ ಲೀಡರ್ ಮಂಜುನಾಥ ಸ್ವಾಮಿಯವರು ನಿವೃತ್ತಿಯನ್ನು ಹೊಂದಿದ ಪ್ರಯುಕ್ತ ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಯಿತು.

17.10.24 ರಂದು ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. 23.10.24ರಂದು ಹಾಸನ ಜಿಲ್ಲೆಯ ಹಾಸನಾಂಬ ಜಾತ್ರೆಗೆ ನಮ್ಮ ಕಾಲೇಜಿನ 8 ವಿದ್ಯಾರ್ಥಿಗಳ ಮೊದಲ ತಂಡ 4 ದಿನಗಳ ಸೇವಾ ಕಾರ್ಯದಲ್ಲಿ ಹಾಗೂ 6 ವಿದ್ಯಾರ್ಥಿಗಳ ಎರಡನೇ ತಂಡ 28.10.24 ರಂದು 4 ದಿನಗಳ ಕಾಲ ಸೇವಾ ಕಾರ್ಯದಲ್ಲಿ ಪಾಲ್ಗೊಂಡಿರುತ್ತಾರೆ.

ದಿನಾಂಕ 10.12.24ರಿಂದ 15.12.24 ರವರೆಗೆ ಮೂಡಬಿದ್ರೆ (ದಕ್ಷಿಣ ಕನ್ನಡ ಜಿಲ್ಲೆ) ಯಲ್ಲಿ ರಾಜ್ಯಮಟ್ಟದ ಸಾಂಸ್ಕೃತಿಕ ಶಿಬಿರವು ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದಿದ್ದು ನಮ್ಮ ಕಾಲೇಜಿನಿಂದ 6 ರೇಂಜರ್ಸ್ ಮತ್ತು 7 ರೋವರ್ಸ್‌ಗಳು ಭಾಗವಹಿಸಿದ್ದರು. 25.5.25ರಂದು 'ವಿಧಾನ ಸಭೆ ಗೈಡೆಡ್ ಟೂರ್' ಸಾರ್ವಜನಿಕ ವೀಕ್ಷಣೆ ಕಾರ್ಯಕ್ರಮನ್ನು ನಮ್ಮ ಕಾಲೇಜಿನ ಸ್ಕೌಟ್ಸ್ ಮತ್ತು ಗೈಡ್ಸ್‌ನ 6 ಸ್ವಯಂ ಸೇವಕರನ್ನು ಕಳುಹಿಸಲಾಗಿತ್ತು. ಪ್ರಸಕ್ತ ಸಾಲಿನ ಕಾರ್ಯಕ್ರಮವನ್ನು ಕಲ್ಪತರು ವಿದ್ಯಾ ಸಂಸ್ಥೆ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ, ಕಾಲೇಜಿನ ಪ್ರಾಂಶುಪಾಲರಿಗೆ ಹಾಗೂ ಈ ಎಲ್ಲಾ ಕಾರ್ಯಕ್ರಮವನ್ನು ಸಹಕರಿಸಿದ ನನ್ನ ಎಲ್ಲಾ ವಿದ್ಯಾರ್ಥಿ ಮಿತ್ರರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**–ಡಾ. ವಿಜಯಕುಮಾರಿ ಟಿ.ಆರ್.**

## ನುಡಿ ಮುತ್ತುಗಳು

**ಯಾರೂ ನಿರಂತರವಾಗಿ ನಮ್ಮ ಜೊತೆಗಿರಬೇಕೆಂಬ ನಿರೀಕ್ಷೆ ಬೇಡ,**
**ಕತ್ತಲಾದ ಮೇಲೆ ನಮ್ಮ ನೆರಳೇ ನಮ್ಮೊಂದಿಗಿರುವುದಿಲ್ಲ.**

**ಸೋಲಿಗೆ ಚಿಂತಿಸಬೇಕಾಗಿಲ್ಲ ನಿಜವಾಗಿ ನಾವು ಯೋಚಿಸಬೇಕಾದದ್ದು**
**ನಾವು ಪ್ರಯತ್ನಿಸದೇ ಕಳೆದುಕೊಂಡ ಸಮಯವನ್ನು**

**ಅರ್ಥಮಾಡಿಕೊಳ್ಳುವ 'ಮನಸ್ಸು' ಕ್ಷಮಿಸುವ 'ಗುಣ'**
**ಕೈಜೋಡಿಸುವ 'ಸ್ನೇಹ', ಸಮಾಧಾನ ಮಾಡುವ ಒಂದು 'ಹೃದಯ'**
**ನಮ್ಮ ಜೀವನದ ನಿಜವಾದ ಆಸ್ತಿಗಳು.**

# ಸಾಂಸ್ಕೃತಿಕ ಚಟುವಟಿಕೆಗಳ ವರದಿ

ದಿನಾಂಕ 29–10–2024 ರಂದು 2024–25 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಡಾ. ಪ್ರಸನ್ನಕುಮಾರ, ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ತಿಮ್ಮಯ್ಯ, ಶಿಕ್ಷಕರು, ಕಾಮಸಮುದ್ರ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಕಲ್ಪತರು ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಹೆಚ್.ಜಿ. ಸುಧಾಕರ್ ಹಾಗೂ ಉಪಾಧ್ಯಕ್ಷರಾದ ಶ್ರೀ ಜಿ.ಪಿ.ದೀಪಕ್, ಪ್ರಾಸ್ತಾವಿಕ ನುಡಿಯನ್ನು ಆಡಿದರು. ದಿನಾಂಕ 20.3.2025 ರಂದು ವಿ.ವಿ ಎಸ್ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು ಇವರು ನಡೆಸಿದ ಪ್ರಬಂಧ ಮತ್ತು ಚರ್ಚಾ ಸ್ಪರ್ಧೆಗಳಲ್ಲಿ ನಮ್ಮ ಕಾಲೇಜಿನ ಚರಣ್‌ರಾಜ್ ಮತ್ತು ಮೇಘಬಾಯಿ ಎಚ್.ಪಿ., ಅಂತಿಮ ಹಾಗೂ ದ್ವಿತೀಯ ಬಿ.ಎ ವಿದ್ಯಾರ್ಥಿಗಳು ಭಾಗವಹಿಸಿ ಚರ್ಚಾ ಸ್ಪರ್ಧೆಯಲ್ಲಿ ಮೇಘಬಾಯಿ ಎಚ್.ಪಿ ತೃತೀಯ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ.

ದಿನಾಂಕ 27–3–2025 ಕ್ರಿಸ್ತ ಜಯಂತಿ ಕಾಲೇಜು, ಬೆಂಗಳೂರು, ಇವರು ಕನ್ನಡ ವಿಭಾಗದ ವತಿಯಿಂದ ನಡೆಸಿದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಪೃಥ್ವಿ ಬಿ.ಹೆಚ್, ವಿಶ್ವಾಸ್ ಕೆ.ಎನ್., ವಿಕಾಸ್.ಆರ್ ಭಾಗವಹಿಸಿ ಆಶುಭಾಷಣ ಸ್ಪರ್ಧೆಯಲ್ಲಿ ವಿಶ್ವಾಸ್ ಕೆ.ಎನ್ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

ದಿನಾಂಕ 27–3–25 ರಂದು ಹಾರನಹಳ್ಳಿ ರಾಮಸ್ವಾಮಿ ಇನ್ಸ್‌ಟಿಟ್ಯೂಟ್ ಆಫ್ ಹೈಯರ್ ಎಜುಕೇಶನ್, ಹಾಸನ, ಇವರ ವ್ಯಾವಹಾರಿಕ ಅಧ್ಯಯನ ವಿಭಾಗದ ವತಿಯಿಂದ ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಚಂದನ್ ಟಿ.ಎಸ್, ಶ್ರವಣ್ ಎನ್.ಆರ್, ಮನೋಹರ್ ಎಸ್, ಜೀವನ್ ಆರ್, ಮಂಜುನಾಥ್ ಆರ್ ಭಾಗವಹಿಸಿ ತೃತೀಯ ಬಹುಮಾನವನ್ನು ಪಡೆದಿರುತ್ತಾರೆ.

16–5–2025ರ ವಿ.ವಿ. ಪುರಂ ಕಲಾ ಕಾಲೇಜು, ಬೆಂಗಳೂರು ಇವರು ನಡೆಸಿದ ರಾಜ್ಯ ಮಟ್ಟದ ಅಂತರ್ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ದಿನಾಂಕ 15–12–2024 ರಂದು ನಮ್ಮ ಕಾಲೇಜಿನಲ್ಲಿ 69ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಿದ್ದರು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಎಸ್.ವಿ.ಪಿ ಕಾಲೇಜು, ತಿಪಟೂರು ಕನ್ನಡ ಉಪನ್ಯಾಸಕರಾದ ಶ್ರೀ ರೇಣುಕಯ್ಯರವರು ಮಾಡಿದರು. ಕಲ್ಪತರು ವಿದ್ಯಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಡಾ. ಜಿ.ಎನ್.ಉಮೇಶ್ ಅಧ್ಯಕ್ಷತೆ ವಹಿಸಿದ್ದರು. .

ಪ್ರತಿಭಾಶ್ರೀ 2025 ರ ಪ್ರಯುಕ್ತ ದಿನಾಂಕ 2–6–2025 ರಿಂದ 12–6–25 ರವರೆಗೆ ನಮ್ಮ ಕಾಲೇಜಿನಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಕಾಲೇಜಿನಲ್ಲಿ ಪ್ರತಿ ಶನಿವಾರದಂದು ವಿವಿಧ ತರಗತಿಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿರುವ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೂ, ಸಾಂಸ್ಕೃತಿಕ ಸಮಿತಿಯ ಸದಸ್ಯರಿಗೂ ಹಾಗೂ ಬೋಧಕ, ಬೋಧಕೇತರ ವರ್ಗದವರಿಗೂ ಹೃದಯ ಪೂರ್ವಕ ಧನ್ಯವಾದಗಳು.

**ಪ್ರೊ. ಶ್ರೀ ಹೆಚ್.ಎನ್. ವಿಶ್ವನಾಥ್**
**ಸಂಚಾಲಕರು ಸಾಂಸ್ಕೃತಿಕ ವೇದಿಕೆ**



Anti-Ragging & Anti-Sexual Harassment Committee



ರೆಡ್ ರಿಬ್ಬನ್ ಸಮಿತಿ



ಕ್ರೀಡಾ ಸಮಿತಿ



ಪ್ರವೇಶ ಸಮಿತಿ



ಪ್ರಾಂಶುಪಾಲರೊಂದಿಗೆ ಗ್ರಂಥಾಲಯ ಸಿಬ್ಬಂದಿ ಹಾಗೂ ಸಿಬ್ಬಂದಿ



ಪ್ರಾಂಶುಪಾಲರೊಂದಿಗೆ ಕಛೇರಿ ಸಿಬ್ಬಂದಿ



ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು




ಬಿ.ಕಾಂ. ಅಂತಿಮ ವರ್ಷ 'ಎ' ವಿಭಾಗದ ವಿದ್ಯಾರ್ಥಿಗಳು




ಬಿ.ಕಾಂ. ಅಂತಿಮ ವರ್ಷ 'ಬಿ' ವಿಭಾಗದ ವಿದ್ಯಾರ್ಥಿಗಳು



ಅಂತಿಮ ವರ್ಷದ ಎಂ.ಕಾಂ. ವಿದ್ಯಾರ್ಥಿಗಳು




ಅಂತಿಮ ವರ್ಷದ ಬಿ.ಎ. ವಿದ್ಯಾರ್ಥಿಗಳು



ಎನ್.ಎಸ್.ಎಸ್ ಸಮಿತಿ ವಿದ್ಯಾರ್ಥಿಗಳೊಂದಿಗೆ




ದಿನಾಂಕ 22-03-2025ರಂದು ಭೂಗೋಳಶಾಸ್ತ್ರ ವಿಭಾಗದಿಂದ ಆಯೋಜಿಸಿದ್ದ "ವಿಶ್ವ ಜಲದಿನ"ದ ವಿಶೇಷ ಉಪನ್ಯಾಸ ಕಾರ್ಯಕ್ರಮ




ದಿನಾಂಕ 11-04-2025ರಂದು ಕನ್ನಡ ವಿಭಾಗದ ವತಿಯಿಂದ ಡಾ. ವೆಂಕಟೇಶ್ ಎಲ್.ಎಂ. ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ




ದಿನಾಂಕ 21-10-2024ರಿಂದ 27-10-24ರವರೆಗೆ ಹರಿಯಾಣದ ಪಾಣಿಪತ್‌ನಲ್ಲಿ ನಡೆದ
ರಾಷ್ಟ್ರೀಯ ಏಕತಾ ಶಿಬಿರದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು




ಯುವ ರೆಡ್ ಕ್ರಾಸ್ ಘಟಕ ಮತ್ತು ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ರಕ್ತದಾನ ಶಿಬಿರ




ವಿಶ್ವ ಪುಸ್ತಕ ದಿನದಂದು ಪ್ರೊ. ಎಸ್.ಎಸ್.ಮಲ್ಲಿಕಾರ್ಜುನ ಪ್ರಸನ್ನ, ಮುಖ್ಯಸ್ಥರು ವಾಣಿಜ್ಯ ಶಾಸ್ತ್ರ ವಿಭಾಗ ಇವರು ರಚಿಸಿರುವ ಪುಸ್ತಕದ ಬಿಡುಗಡೆ




ದಿನಾಂಕ 23-04-2025 ರಂದು ಗ್ರಂಥಾಲಯ ವಿಭಾಗದಿಂದ ವಿಶ್ವ ಪುಸ್ತಕ ದಿನಾಚರಣೆ



ವಾಣಿಜ್ಯಶಾಸ್ತ್ರ ವಿಭಾಗ ಹಾಗೂ ಎಂ.ಬಿ.ಎ ವಿಭಾಗ (ಕೆ.ಐ.ಟಿ) ಕಾಲೇಜು ಸಹಯೋಗದೊಂದಿಗೆ ದಿನಾಂಕ 15/5/25 ಮತ್ತು 16/05/25 ರಂದು ಕಂಪನಿ ಅನಾಲಿಸೀಸ್ ರಿಪೋರ್ಟ್ ಎಂಬ ವಿಷಯದ ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಯಿತು.




ವಾಣಿಜ್ಯಶಾಸ್ತ್ರ ವಿಭಾಗ ಹಾಗೂ ವಿಘ್ನೇಷ್ ಇನ್ಫೋಟೆಕ್ ಸಲ್ಯೂಷನ್‌ನ ಸಹಯೋಗದೊಂದಿಗೆ 10/12/2024 ರಂದು **Tally graduation day** ಗ್ರಾಜುಯೇಷನ್ ಡೇ ಅನ್ನು ಆಯೋಜಿಸಲಾಗಿತ್ತು.




ದಿನಾಂಕ 28-05-25ರಂದು ಇತಿಹಾಸ ವಿಭಾಗ ಮತ್ತು **IQAC** ವತಿಯಿಂದ ಡಾ.ಮಲ್ಲಿಕಾರ್ಜುನ ಜವಳಿರವರಿಂದ ವಿಶೇಷ ಉಪನ್ಯಾಸ



ಬೃಹತ್ ಉದ್ಯೋಗ ಮೇಳದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಶ್ರೀ ಕೆ. ಷಡಕ್ಷರಿರವರು

ಕಲ್ಪತರು ವಿದ್ಯಾಸಂಸ್ಥೆ ಹಾಗೂ ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್ ಇವರ ಸಹಯೋಗದೊಂದಿಗೆ **ದಿನಾಂಕ 09.01.2025** ಗುರುವಾರದಂದು**"ಬೃಹತ್ ಉದ್ಯೋಗ ಮೇಳ"**ವನ್ನು ಕಲ್ಪತರು ಕಾಲೇಜು ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ವಿದ್ಯಾಸಂಸ್ಥೆಯ ಅಧ್ಯಕ್ಷರಾದ **ಶ್ರೀ.ಪಿ.ಕೆ.ತಿಪ್ಪೇರುದ್ರಪ್ಪನವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತಿಪಟೂರು ತಾಲ್ಲೂಕಿನ ಮಾನ್ಯ ಶಾಸಕರಾದ ಶ್ರೀ.ಕೆ.ಷಡಕ್ಷರಿರವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಾ.ರಾಮಕೃಷ್ಣರೆಡ್ಡಿ.ಕೆ. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಶ್ರೀಮತಿ ಕರ್ಪಗಮ್ ಪ್ರಕಾಶ್ ಸಿ.ಟಿ. ಮ್ಯಾನೇಜರ್ ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್, ಶ್ರೀಮತಿ ಸಪ್ತಶ್ರೀ.ಬಿ.ಕೆ. ಉಪ ವಿಭಾಗಾಧಿಕಾರಿಗಳು, ತಿಪಟೂರು ಮತ್ತು ಶ್ರೀ ಪವನ್‌ಕುಮಾರ್.ಎಸ್. ತಹಸೀಲ್ದಾರ್‌ರವರು,** ತಿಪಟೂರು ಇವರುಗಳು ಉಪಸ್ಥಿತರಿದ್ದರು. ವಿದ್ಯಾಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ಬೃಹತ್ ಉದ್ಯೋಗ ಮೇಳದಲ್ಲಿ ಸುಮಾರು **2500**ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಿದ್ದರು. **70**ಕ್ಕೂ ಹೆಚ್ಚು ಕಂಪನಿಗಳು ಬೆಂಗಳೂರು ಮತ್ತು ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದರು. **400**ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಉದ್ಯೋಗ ಅರ್ಹತಾ ಪತ್ರವನ್ನು ಪಡೆದರು.



**ಕಲ್ಪತರು ವಿದ್ಯಾ ಸಂಸ್ಥೆಯ ಪದಾಧಿಕಾರಿಗಳು**




**ಉದ್ಯೋಗಮೇಳ ನಡೆದ ಕಲ್ಪತರು ಕ್ರೀಡಾಂಗಣದ ಪ್ರವೇಶದ್ವಾರ**



ಬೃಹತ್ ಉದ್ಯೋಗ ಮೇಳದ ಸ್ಟಾಲ್‌ಗಳನ್ನು ಶಾಸಕ ಶ್ರೀ ಕೆ. ಷಡಕ್ಷರಿರವರು ಉದ್ಘಾಟಿಸಿದರು.
ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಡಾ. ರಾಮಕೃಷ್ಣರೆಡ್ಡಿ ಉಪಸ್ಥಿತರಿದ್ದರು



ಬೃಹತ್ ಉದ್ಯೋಗ ಮೇಳದ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉದ್ಯೋಗಾಕಾಂಕ್ಷಿಗಳು
ಹಾಗೂ ವಿವಿಧ ಕಂಪನಿಗಳ ಮಾನವ ಸಂಪನ್ಮೂಲಾಧಿಕಾರಿಗಳು



ಬೃಹತ್ ಉದ್ಯೋಗ ಮೇಳದ ಸ್ಟಾಲ್‌ಗಳಿಗೆ ಭೇಟಿ ನೀಡಿದ ಉದ್ಯೋಗಾಕಾಂಕ್ಷಿಗಳು

ಉದ್ಯೋಗ ಮಾಹಿತಿ ಮತ್ತು ಸ್ಥಾನೀಕರಣ ಕೋಶ, ವಾಣಿಜ್ಯಶಾಸ್ತ್ರ ವಿಭಾಗ ಮತ್ತು IQAC ಸಹಯೋಗದೊಂದಿಗೆ **ದಿನಾಂಕ 28.11.2024**ರಂದು ಬೆಳಿಗ್ಗೆ 11 ಗಂಟೆಗೆ ಒಂದು ದಿನದ Pre placement training programme ಅನ್ನು ಆಯೋಜಿಸಲಾಗಿತ್ತು. ಪ್ರಾಂಶುಪಾಲರಾದ ಡಾ.ಜಿ.ಎನ್.ಉಮೇಶ್‌ರವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾದ ಶ್ರೀ ಗಜೇಂದ್ರ, ಆಂತರಿಕ ಲೆಕ್ಕ ಪರಿಶೋಧಕರು, ಕಿಯೋನಿಕ್ಸ್, ತಿಪಟೂರು ಶಾಖೆ ಮತ್ತು ಶ್ರೀಮತಿ ಕುಸುಮ Junior Councilor Financial Literacy ಇವರು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದರು.







ಉದ್ಯೋಗ ಮಾಹಿತಿ ಮತ್ತು ಸ್ಥಾನೀಕರಣ ಕೋಶ, ವಾಣಿಜ್ಯಶಾಸ್ತ್ರ ವಿಭಾಗ ಮತ್ತು IQAC ಸಹಯೋಗದೊಂದಿಗೆ **ದಿನಾಂಕ 16.12.2024 ರಿಂದ 18.12.2024**ರವರೆಗೆ ಮೂರು ದಿನಗಳ ಉಚಿತ ಪೂರ್ವ ನಿಯೋಜಿತ ಉದ್ಯೋಗ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. **"ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್"** ಬೆಂಗಳೂರು ಇವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.





**ವಿದ್ಯಾರ್ಥಿಗಳೊಂದಿಗೆ ಸಂವಾದ**

ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು, ವಾಣಿಜ್ಯ ಶಾಸ್ತ್ರ ವಿಭಾಗ ಹಾಗೂ ಐಕ್ಯುಎಸಿ ಸಹಯೋಗ ದೊಂದಿಗೆ ದಿನಾಂಕ 24.03.2025ರ ಸೋಮವಾರದಂದು ತೃತೀಯ ಬಿಕಾಂ, ಬಿ.ಎ ಹಾಗೂ ಎಂ.ಕಾಂ ವಿದ್ಯಾರ್ಥಿಗಳಿಗೆ ಸಂವಹನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ತನುಜ್ ಕುಮಾರ್ ಯು.ಪಿ.ಎಸ್.ಸಿ 2023 ಬ್ಯಾಚ್ ಹಾಗೂ ನರಸಿಂಹಮೂರ್ತಿಯವರು ಆಗಮಿಸಿದ್ದರು. ಇವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಯು.ಪಿ.ಎಸ್.ಸಿ ಹಾಗೂ ಕೆ.ಪಿ. ಎಸ್.ಸಿ ಪರೀಕ್ಷೆಗಳ ತಯಾರಿ ಮತ್ತು ಸಾಧನೆಯ ಹಾದಿ ಹೇಗಿರಬೇಕು ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.










ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು, ವಾಣಿಜ್ಯಶಾಸ್ತ್ರ ವಿಭಾಗ ಹಾಗೂ **IQAC** ಸಹಯೋಗದೊಂದಿಗೆ ದಿನಾಂಕ : 17–4–2025ರ ಗುರುವಾರದಂದು ಬಿಎ, ಬಿಕಾಂ, ಬಿಬಿಎ ಹಾಗೂ ಎಂ.ಕಾಂ ವಿದ್ಯಾರ್ಥಿಗಳಿಗೆ **expectation of the Industry from Prospective Candidates** ಎಂಬ ವಿಷಯದ ಕುರಿತು ಸಂವಹನ ಕಾರ್ಯಕ್ರಮವನ್ನುಹಮ್ಮಿಕೊಳ್ಳಲಾಗಿತ್ತು. ವಿಶೇಷ ಉಪನ್ಯಾಸಕರಾಗಿ ಶ್ರೀ ಜಿ.ಎನ್.ವಿಶ್ವೇಶ್ವರ, ನ್ಯಾಷನಲ್ ಮೇನೇಜರ್, ಸಿಪಿಎಂ ಇಂಡಿಯಾ ಸೇಲ್ಸ್ ಮತ್ತು ಮಾರ್ಕೆಟಿಂಗ್, ಬೆಂಗಳೂರು ಇವರು ಮೇಲ್ಕಂಡ ವಿಷಯದ ಕುರಿತು ಸವಿಸ್ತಾರವಾಗಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಜಿ.ಪಿ.ದೀಪಕ್ ಉಪಾಧ್ಯಕ್ಷರು, ಕ.ವಿ.ಸಂ, ಶ್ರೀ ಹೆಚ್.ಜಿ.ಸುಧಾಕರ್, ಕರ್ಾರ್ಯದರ್ಶಿಗಳು, ಕ.ವಿ.ಸಂ., ಆಗಮಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಡಾ.ಟಿ.ಆರ್.ವಿಜಯಕುಮಾರಿ ಅವರು ವಹಿಸಿದ್ದರು.











ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 28–05–2025 ಮತ್ತು 29–5–2025 ವಾರ್ಷಿಕ ಕೈಗಾರಿಕಾ ಪ್ರವಾಸವನ್ನು ಏರ್ಪಡಿಸಲಾಗಿತ್ತು . ಮೈಸೂರಿನಲ್ಲಿರುವ BEML ಕಂಪನಿಗೆ ಅಂತಿಮ ಬಿ.ಕಾಂ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಲಾಗಿತ್ತು.



ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 28–05–25 ಮತ್ತು 29–05–25 ಪ್ರವಾಸವನ್ನು ಏರ್ಪಡಿಸಲಾಗಿತ್ತು .ಮೈಸೂರಿನಲ್ಲಿರುವ Karnataka soaps and detergents Ltd ಕಂಪನಿಗೆ ಅಂತಿಮ ಬಿ.ಕಾಂ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಲಾಗಿತ್ತು.



ಬಿ.ಬಿ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳು



ದಿನಾಂಕ 9-4-2025ರಂದು ಅಂತಿಮ ಬಿ.ಕಾಂ ಮತ್ತು ಎಂ.ಕಾಂ. ವಿದ್ಯಾರ್ಥಿಗಳು ತಿಪಟೂರಿನ ನಮ್ರತಾ ಆಯಿಲ್ ರಿಫೈನರೀಸ್ ಲಿಮಿಟೆಡ್‌ಗೆ ಭೇಟಿ ನೀಡಿದ ಸಂದರ್ಭ




ದಿನಾಂಕ 17-4-25ರ ಗುರುವಾರದಂದು ಬಿ.ಎ, ಬಿ.ಕಾಂ ಹಾಗೂ ಎಂ.ಕಾಂ ವಿದ್ಯಾರ್ಥಿಗಳಿಗೆ **Expectation of the industry from the prospective candidates** ಎಂಬ ವಿಷಯ ಕುರಿತು ಸಂವಹನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿಶೇಷ ಉಪನ್ಯಾಸಕರಾಗಿ ಜಿ.ಎನ್.ವಿಶ್ವೇಶ್ವರ ನ್ಯಾಷನಲ್‌ಮ್ಯಾನೇಜರ್, ಸಿ.ಪಿ.ಎಂ ಇಂಡಿಯಾ ಸೇಲ್ಸ್ ಮತ್ತು ಮಾರ್ಕೆಟಿಂಗ್ ಬೆಂಗಳೂರು ಇವರು ಆಗಮಿಸಿದ್ದರು.




ನಮ್ಮ ಕಾಲೇಜಿನ ಹಿರಿಯ ಬಿ.ಕಾಂ. ವಿದ್ಯಾರ್ಥಿನಿ ರಕ್ಷಿತ ಎಂ.ಆರ್. ರವರು 2023-24 ನೇ ಸಾಲಿನ ಎಂ.ಬಿ.ಎ, ಪಿ.ಜಿ.ಸಿ.ಇ.ಟಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ 196ನೇ ರ್‍ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.



ಕ್ರೀಡಾ ವಿಭಾಗ




ಚಿಕ್ಕ ಹೊನ್ನವಳ್ಳಿ ಗ್ರಾಮದಲ್ಲಿ ದಿನಾಂಕ 3-5-2025ರಿಂದ 9-5-2025ರವರೆಗೆ ನಡೆದ ವಾರ್ಷಿಕ ವಿಶೇಷ ಎನ್‌ಎಸ್‌ಎಸ್ ಶಿಬಿರವನ್ನು ಪ್ರಾಂಶುಪಾಲರಾದ ಡಾ. ವಿಜಯಕುಮಾರಿ ಹಾಗೂ ಗ್ರಾಮಪಂಚಾಯ್ತಿ ಅಧ್ಯಕ್ಷೆ ಶ್ರೀಮತಿ ಸುಶೀಲ ಜಿ.ಎಸ್. ಇವರು ಉದ್ಘಾಟಿಸಿದರು.




ಚಿಕ್ಕ ಹೊನ್ನವಳ್ಳಿ ಶಾಲಾ ಆವರಣದಲ್ಲಿ ಧ್ವಜ ಆರೋಹಣ ಕಾರ್ಯಕ್ರಮ

# ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಶ್ರಮದಾನ



ಪುರಾತನ ಕಲ್ಯಾಣಿಯನ್ನು ಎನ್.ಎಸ್.ಎಸ್.
ವಿದ್ಯಾರ್ಥಿಗಳು ಸ್ವಚ್ಛಗೊಳಿಸುತ್ತಿರುವುದು



ವಿಶ್ವ ಯೋಗ ದಿನಾಚರಣೆ




ಎನ್.ಎಸ್.ಎಸ್. ಧ್ವಜ ಆರೋಹಣದಲ್ಲಿ ಎನ್.ಎಸ್.ಎಸ್. ಗೀತೆ
ಹಾಗೂ ರಾಷ್ಟ್ರಗೀತೆ ಹಾಡುತ್ತಿರುವ ಸ್ವಯಂಸೇವಕರು



ಯುವಜನ ಕ್ರೀಡಾ ಇಲಾಖೆಯ ಕಮೀಷನರ್ ಶ್ರೀ ಚೇತನ್ ಆರ್.
ಹಾಗೂ ಖ್ಯಾತ ವೈದ್ಯ ಡಾ॥ ಶ್ರೀಧರ್ ಅವರೊಂದಿಗೆ
ಎನ್.ಎಸ್.ಎಸ್. ಶಿಬಿರಾರ್ಥಿಗಳು



ಚಿಕ್ಕಹೊನ್ನವಳ್ಳಿ ಗ್ರಾಮದ ಸ್ಮಶಾನದಲ್ಲಿ ಎನ್.ಎಸ್.ಎಸ್.
ವಿದ್ಯಾರ್ಥಿಗಳಿಂದ ಸಸಿ ನೆಡುವ ಕಾರ್ಯಕ್ರಮ

9ನೇ ಜನವರಿ 25 ರಂದು ಕಲ್ಪತರು ವಿದ್ಯಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳದಲ್ಲಿ 80 ಕಂಪೆನಿಗಳು ಭಾಗವಹಿಸಿದ್ದು ,ನಮ್ಮ ಕಾಲೇಜಿನಿಂದ 110 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆಂದು ತಿಳಿಸಲು ಹರ್ಷಿಸುತ್ತೇವೆ.

## ಪ್ರಮುಖ ಕಂಪನಿಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳು



ಚರಣ್‌ರಾಜ್ ಆರ್.
ತೃತೀಯ ಬಿ.ಎ.



ಸಲೇಹಾ ಮುಬಾರಕ್
ತೃತೀಯ ಬಿಕಾಂ



ನಿದಾ ಸಿಮ್ರಾನ್
ತೃತೀಯ ಬಿಕಾಂ



ಶ್ರೇಯಾ ಜೋಶಿ
ತೃತೀಯ ಬಿಕಾಂ



ಮಹಾಲಕ್ಷ್ಮಿ ಆರ್
ತೃತೀಯ ಬಿ.ಕಾಂ.



ಯಶಸ್ವಿನಿ ಹೆಚ್.ಎನ್.
ತೃತೀಯ ಬಿ.ಕಾಂ



ಚಂದನ ಎಸ್.
ತೃತೀಯ ಬಿ.ಎ



ಸ್ಫೂರ್ತಿ ಹೆಚ್.ಆರ್.
ತೃತೀಯ ಬಿ.ಎ



ರೌಶ್ನಿ ಟಿ.ಎಸ್.
ತೃತೀಯ ಬಿ.ಕಾಂ.



ಅಸ್ಗರ್ ಅಲಿ ಸಿ.ಬಿ
ಬಿ.ಕಾಂ
2023-24 ಬ್ಯಾಚ್



ಪವನ್ ಹೆಚ್.ಎಸ್.
ಬಿ.ಕಾಂ
2023-24 ಬ್ಯಾಚ್



ನಿಶ್ಚಿತ ಆರ್.ಕದಮ್
ತೃತೀಯ ಬಿಕಾಂ



ಗಾಯತ್ರಿ ಎಂ
ದ್ವಿತೀಯ ಬಿಕಾಂ

# ನಮ್ಮ ಕಾಲೇಜಿನ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

**7ನೇ ರ್‍ಯಾಂಕ್**



**ನಿಶ್ಚಿತ ವಿ.ಎಸ್.**
ಇತಿಹಾಸ ಮತ್ತು ಭೂಗೋಳ ಶಾಸ್ತ್ರ
ಅಂತಿಮ ಬಿ.ಎ. **98%**



**ಗಗನ ಎ.ಎಸ್.**
ಅರ್ಥಶಾಸ್ತ್ರ ಮತ್ತು ಸಮಾಜ ಶಾಸ್ತ್ರ
ಅಂತಿಮ ಬಿ.ಎ. **94%**



**ಸುಪ್ರಿಯಾ ಎ.ಎಲ್**
ಮನೋವಿಜ್ಞಾನ
ಅಂತಿಮ ಬಿ.ಎ. **91%**



**ಮಹಮದ್ ಶಹಬಾಜ್**
ಐಚ್ಛಿಕ ಕನ್ನಡ ಮತ್ತು ಸಮಾಜಶಾಸ್ತ್ರ
ಅಂತಿಮ ಬಿ.ಎ. **85%**



**ಕರಣ್**
ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ
ಅಂತಿಮ ಬಿ.ಎ. **85%**



**ವರ್ಷಿತ**
ಐಚ್ಛಿಕ ಇಂಗ್ಲೀಷ್
**80%**



**ರಕ್ಷಿತಾ ಎಂ.ಆರ್**
ಅಂತಿಮ ಬಿ.ಕಾಂ.,
**94%**



**ಅನುಷಾ ಡಿ.ಎಸ್.**
ಅಂತಿಮ ಬಿ.ಕಾಂ.
**92%**

## ನಾ ಕಂಡ ಕನಸೇ

ನಾ ಕಂಡ ಕನಸೇ ಅಂದು
ನನ್ನೆದುರು ಬಂದಂತೆ
ನನ್ನೆಲ್ಲಾ ಕಲ್ಪನೆಯೇ
ಕಣ್ಮುಂದೆ ನಿಂತಂತೆ

ನಾ ಕೈ ಚಾಚಿದ ಕವಿತೆ
ಪದಗಳಿಗೆಟುಕದಲೇ ನೀ ನಿಂತೆ
ವರ್ಣನಾತೀತಳಾದ ಸುವರ್ಣ
ಒಮ್ಮೆ ಕೇಳು ನೀ ನನ್ನ ಅಂತಃಕರಣ

ಬದುಕಿನ ಹೆಜ್ಜೆಗೆ ಜೊತೆಯಾಗಿ
ಒಲವಿನ ಗುಡಿಯ ಸತಿಯಾಗಿ
ನೀ ಬರುವೆ ಬಂದು ಕಾದಿರುವೆ
ನಾ ನಿನ್ನಲ್ಲೇ ಕಳೆದು ಹೋಗಿರುವೆ

ಕಾಲ್ತೊಳೆದು ಆಹ್ವಾನಿಸುವೆನು
ಓ ನನ್ನ ನಲ್ಲೇ.......
ನಿನ್ನದೇ ಹಾದಿ ಕಾಯ್ದು ಕುಳಿತಿರುವೆನು
ಮೊದಲ ಬಾರಿ ನಾ ನಿನ್ನ ಕಂಡಲ್ಲೇ......



ಸ್ಫೂರ್ತಿ ಹೆಚ್. ಆರ್
3rd Year B A

## ಹೆತ್ತವಳು ಹೆಣ್ಣು

ಹೊತ್ತವಳು ಹೆಣ್ಣು
ವಾತ್ಸಲ್ಯದ ತುತ್ತನಿತ್ತವಳು ಹೆಣ್ಣು
ಮಮತೆಯ ಭಾವ ತಂದವಳು ಹೆಣ್ಣು
ಭ್ರಾತೃತ್ವದ ಭಾವ ತಂದವಳು ಹೆಣ್ಣು
ಬದುಕಿಗೆ ಅರ್ಥ ಕೊಡುವವಳು ಹೆಣ್ಣು
ಹೆಣ್ಣು ಮನೆಯ ಕಣ್ಣು
ಅಕ್ಕ – ತಂಗಿಯರಂತೆ ಹೆತ್ತ ತಾಯಿಯಂತೆ
ಆಪ್ತ ಗೆಳತಿಯಂತೆ
ತಾಳಿ ನೀ ಹೆಣ್ಣಿನ ಜೀವವಾ
ಮಾನವ, ಉಳಿಸಿಕೋ ನಿನ್ನ 'ಮಾನ' ವ



ಸ್ಫೂರ್ತಿ ಹೆಚ್. ಆರ್
3rd Year B A

## ಭಾವನೆ

ಪರ್ವತದಿಂದ ಹರಿಯುವ ನದಿಗೇನು ತಿಳಿದಿದೆ ತನ್ನ ಪಯಣ ಎಲ್ಲಿಗೆಂದು?
ಗಿಡದಲ್ಲಿ ಅರಳಿದ ಹೂವಿಗೇನು ತಿಳಿದಿದೆ ತನ್ನ ಸಮರ್ಪಣೆ ಯಾವ ದೇವರ ಪಾದಕ್ಕೆಂದು?
ಸ್ವಚ್ಛಂದವಾಗಿ ಬೀಸುವ ಗಾಳಿಗೇನು ತಿಳಿದಿದೆ ತನ್ನ ಚಲನೆ ಯಾವ ದಿಕ್ಕಿಗೆಂದು?
ದ್ವೇಷ, ವೈರಾಗ್ಯ, ಅಸೂಯೆ ಏತಕೆ ಮನದಲ್ಲಿ.
ಪ್ರತಿದಿನವೂ ಅಚ್ಚರಿ ಕಾದಿರುವ ಈ ಬದುಕಿಗೇನು ತಿಳಿದಿದೆ ತನ್ನ ಭವಿಷ್ಯ ಎತ್ತ ಸಾಗುವುದೆಂದು?

## ನನ್ನ ಅಪ್ಪ

ಕೈ ಬೆರಳ ಹಿಡಿದು ನನಗೆ ನಡಿಗೆ ಕಲಿಸಿಕೊಟ್ಟವರು
ಬಿದ್ದಾಗ ನನ್ನ ನೊಂದ ಮನವ ಸಂತೈಸಿದವರು
ನಾನು ಹಾದಿ ತಪ್ಪಿದಾಗ ಕಣ್ಣಲ್ಲೆ ಗದರಿದವರು
ಆ ಗದರುವಿಕೆಯ ಧನಿಯಲ್ಲೆ ಮಧುರ ಪ್ರೀತಿಯನ್ನು ತುಂಬಿಕೊಂಡವರು

ಸೋತಾಗ ಧೈರ್ಯ ತುಂಬಿದವರು ಗೆದ್ದಾಗ ಬೆನ್ನು ತಟ್ಟಿದವರು
ತನ್ನ ಕಂದ ನೊಂದುಕೊಂಡಾಗ ಯಾರಿಗೂ ತಿಳಿಯದಂತೆ ಕಣ್ಣಂಚಿನಲ್ಲಿ ನೀರು ಸುರಿಸಿದವರು
ತಾನು ಕಾಣದ ಜಗವನ್ನು ತನ್ನ ಕೂಸಿಗೆ ತೋರಿಸಿದವರು

ತಾನು ಹರುಕು ತೊಟ್ಟು ಸಂಸಾರಕ್ಕಾಗಿ ತನ್ನನ್ನು ಮುಡುಪಾಗಿಸಿಕೊಂಡವರು ಅವರೇ ನನ್ನ ಅಪ್ಪ
ಪ್ರೀತಿ, ಗೌರವ, ಭಯ ಎಲ್ಲ ಭಾವನೆಗಳು ಒಟ್ಟಿಗೆ ಇರುವ ಅಪರೂಪದ ಜೀವ.

## ಮನಸ್ಸು

ಮನಸ್ಸು ಮೂಕವಾದಾಗ ಮಾತು ಮೌನವಾಗುತ್ತೆ.
ಮನಸ್ಸಿಗೆ ಸಂತಸವಾದಾಗ ಮಾತು ನಗುವಾಗುತ್ತೆ.
ಮನಸ್ಸಿಗೆ ದುಃಖವಾದಾಗ ಮಾತು ಕಣ್ಣೀರಾಗುತ್ತೆ.
ಮನಸ್ಸಿಗೆ ದುಗುಡವಾದಾಗ ಮಾತು ಗದ್ಗದಿತವಾಗುತ್ತೆ.

ಈ ಮನಸ್ಸಿನ ಮಾತು ವಿಭಿನ್ನ ಬೆಲೆ ಕಟ್ಟಲಾಗದ ಪ್ರೀತಿಯನ್ನು,
ವಾತ್ಸಲ್ಯಭರಿತ ಸಂಬಂಧವನ್ನು ಇರುವ ಆತ್ಮೀಯತೆಯನ್ನು ಗುರುತಿಸದೇ
ಇಲ್ಲದ ಕಡೆಯಲೆಲ್ಲಾ ಹುಡುಕಾಡಿ ನರಳುತ್ತದೆ.



**Anushree P**
**3rd Year B.Com**

## ಕವನ

ಆನೆಯು ಒಂದು ಪ್ರಾಣಿ ಸುಮ್ಮನೆ ನೋಡುವವರ ಕಣ್ಣಿಗೆ,
ಆನೆಯು ಒಂದು ದೈವಿ ಸ್ವರೂಪ ದೈವದಿಂದ ನೋಡುವರ ಕಣ್ಣಿಗೆ
ಆನೆಯು ಒಂದು ಮನೋರಂಜನೆ ಕೊಡುವ ಪ್ರಾಣಿ ಮಕ್ಕಳ ಕಣ್ಣಿಗೆ,
ಆನೆಯು ಒಂದು ದುಬಾರಿ ಪ್ರಾಣಿಯು
ದಂತ ಮಾರುವವನ ಕಣ್ಣಿಗೆ,
ಆನೆಯು ಒಂದು ರಾಜ್ಯ ಪ್ರಾಣಿ ಜನರ ಕಣ್ಣಿಗೆ
ಆನೆಯು ಒಂದು ಮಗುವಿದ್ದಂತೆ ಅದರ ಮಾವುತನ ಕಣ್ಣಿಗೆ
ಆನೆಯು ಒಂದು ವಾಹನ ತಾಯಿ ಚಾಮುಂಡಿಯ ಕಣ್ಣಿಗೆ.



**Sahana T R**
**1st Year M.Com**

## ಕಪ್ಪು ಮನಸು

ಕಾಣದೊಂದು ಕಪ್ಪು ಮನಸು ನನ್ನ ಒಳಗೂ ನಿನ್ನ ಒಳಗೂ
ಕಲ್ಮಶದಿಂದ ಏಕೆ ಕುದಿವೆ ನೀನು,
ಒಳ್ಳೆತನಕೊಮ್ಮೆ ಕರಗು ಚೂರು,
ಕಗ್ಗತ್ತಲು ಇಣುಕುತ್ತಿದೆ ನಿನ್ನ ಕಣ್ಣಂಚಲಿ
ಬೆಳದಿಂಗಳ ಹುಡುಕು ನೀನು ನಿನ್ನ ಮನದ ಅಂಗಳದಿ
ಕೊಳೆತ ಯೋಚನೆಗಳಿಗೆ ಪರಿಮಳದ
ನಾಟಕವು ಕಿರುನಗೆಯ ಮುಖದ ಹಿಂದೆ
ರಾಕ್ಷಸನ ಆರ್ಭಟವು
ಯಾಕೆ ಕಪ್ಪು ಕಾಯಿಲೆ ಕಾಣದೊಂದು ಕಪ್ಪು
ಮನಸು ನನ್ನ ಒಳಗೂ ನಿನ್ನ ಒಳಗೂ........



**Tabassum**
**2nd Sem M.Com**

# ವಿದ್ಯೆಯ ಮಹತ್ವ

ವಿದ್ಯೆ ಎಂದರೆ ಜೀವನದ ಬೆಳಕು, ಮಾನವನ ಬದುಕನ್ನು ಬೆಳಗಿಸುವ ಶಕ್ತಿ ವಿದ್ಯೆಯಲ್ಲಿದೆ. ವಿದ್ಯೆಯ ಮೂಲಕ ನಾವು ಜ್ಞಾನವನ್ನು ಪಡೆದರೆ, ಸಮಾಜದಲ್ಲಿ ಒಳ್ಳೆಯ ಸ್ಥಾನ ಪಡೆಯಬಹುದು. ಶಿಕ್ಷಣವಿಲ್ಲದೆ ಜೀವನವು ಅರ್ಥಹೀನವಾಗುತ್ತದೆ

ವಿದ್ಯೆ ಮನುಷ್ಯನ ಒಳಿತು – ಕೆಡಕನ್ನು ತಿಳಿದುಕೊಳ್ಳಲು ಬುದ್ಧಿ ನೀಡುತ್ತದೆ. ಒಬ್ಬ ವ್ಯಕ್ತಿಯ ನಡತೆ ಮಾತನಾಡುವ ಶೈಲಿ, ಆಲೋಚನೆ, ಬದುಕನ್ನು ಎದುರಿಸುವ ಧೈರ್ಯ ಎಲ್ಲವೂ ವಿದ್ಯೆಯಿಂದ ಬರುತ್ತದೆ. ಅಜ್ಞಾನದ ಅಂಧಕಾರವನ್ನು ಜ್ಞಾನವೆಂಬ ಬೆಳಕನ್ನು ನೀಡುವುದು ವಿದ್ಯೆಯ ಮಹತ್ವ.

ಇಂದಿನ ಜಗತ್ತಿನಲ್ಲಿ ವಿದ್ಯೆ ಬಹಳ ಮುಖ್ಯವಾಗಿದೆ. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ವಾಣಿಜ್ಯ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಲು ಶಿಕ್ಷಣ ಅವಶ್ಯಕ. ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳಲು ವಿದ್ಯೆ ಸಹಾಯಮಾಡುತ್ತದೆ.

ಶಿಕ್ಷಣವು ವ್ಯಕ್ತಿಗೆ ಉದ್ಯೋಗ ಮಾತ್ರವಲ್ಲ, ಒಳ್ಳೆಯ ಮನುಷ್ಯನಾಗಲು ಸಹ ಸಹಾಯಮಾಡುತ್ತದೆ. ಸಮಾಜದಲ್ಲಿ ಜವಾಬ್ದಾರಿಯುತ ನಾಗರೀಕರಾಗಲು ವಿದ್ಯೆ ಅಗತ್ಯ. ವಿದ್ಯೆಯಿಲ್ಲದ ಸಮಾಜ ಒಂದು ಮರಳುಗಾಡು. ವಿದ್ಯೆ ಇರುವೆಡೆ ಜ್ಞಾನ, ಶಿಸ್ತು ಮತ್ತು ಪ್ರಗತಿಯು ಇರುತ್ತವೆ.

ನಾವು ಕೇವಲ ಪುಸ್ತಕದ ಪಾಠ ಓದಿ ಪರೀಕ್ಷೆಯಲ್ಲಿ ಅಂಕ ಪಡೆಯುವ ಜ್ಞಾನದಲ್ಲಿ ಜೀವನವನ್ನು ಹಿತಕರವಾಗಿ ಸಾಗಿಸಲು ಸಹಾಯಕವಾಗುವಂತಹ ಶಿಕ್ಷಣವನ್ನು ಪಡೆಯಬೇಕು. ಹೆಣ್ಣು ಮಕ್ಕಳಿಗೂ ಸಮಾನ ಶಿಕ್ಷಣ ಸಿಗಬೇಕು. ಈ ದೃಷ್ಟಿಯಿಂದ ನಾವು ವಿದ್ಯೆಯ ಮಹತ್ವವನ್ನು ಅರಿತುಕೊಳ್ಳಬೇಕು.

**ಉಪ ಸಂಹಾರ**

ವಿದ್ಯೆ ಎಂಬುದು ಬದುಕನ್ನು ಬೆಳಗಿಸುವ ದೀಪ ನಾವು. ಶಿಕ್ಷಣವನ್ನು ಗೌರವದಿಂದ ಸ್ವೀಕರಿಸಬೇಕು. ನಾವು ಕಲಿತ ವಿದ್ಯೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಿದ್ಯೆಯ ಮೂಲಕ ಮಾತ್ರ ನಾವು ಸಜ್ಜನರಾಗಬಹುದು ಮತ್ತು ಸಮಾಜದಲ್ಲಿ ಒಳ್ಳೆಯ ಬದಲಾವಣೆ ತರಬಹುದು.



**Vikas M V**
**1st Year M.Com**

# ನಾನು ಚಪ್ಪಲಿ



– **ಆರ್.ಆರ್. ಭರತ್,** ಎಂ.ಎ.
ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರು

ಹೂ.. ನಾನು ಚಪ್ಪಲಿ. ಇವತ್ತು ನಾನು ನನ್ನ ಬಗ್ಗೆ ಹೇಳೋದಕ್ಕೆ ಹೊರಟಿದ್ದೇನೆ. ಏನಪ್ಪ ಇದು ಚಪ್ಪಲಿನೂ ಮಾತಾಡೋಂಗೆ ಆಯ್ತು ಅಂತ ಅಂದುಕೊಳ್ತಾ ಇದ್ದೀರಾ! ಹೌದು ಗುರು ನಾವೇನ್ ಕಡಿಮೆನಾ ಕುಳ್ಳಗಿರೋ ವ್ಯಕ್ತಿ ನನ್ನನ್ನು ಕಂಡ್ರೆ ಅವರನ್ನ ಎತ್ತರಕ್ಕೆ ಹೋಗೋಕೆ ಸಹಾಯ ಮಾಡ್ತೀನಿ, ಯಾರ ಕಾಲಿಗೂ ಕಲ್ಲು ಮುಳ್ಳು ಚುಚ್ಚದೆ ಇರೋ ತರ ನೋಡ್ಕೊಳ್ತೀನಿ, ಒಟ್ನಲ್ಲಿ ಯಾರು ನನ್ನನ್ನು ಕಾಲಿಗೆ ಹಾಕಿಕೊಳ್ಳುತ್ತಾರೋ ಅವರ ಸುರಕ್ಷತೆಯೇ ನನ್ನ ಹೊಣೆ. ಅದಕ್ಕೆ ನನ್ನ ಬಗ್ಗೆ ಹೇಳಕ್ಬಂದೆ. ಇಲ್ಲಿ ನಮ್ ಬಗ್ಗೆ ನಾವೇ ಮಾತಾಡಬೇಕು. ಯಾರು ಮಾತಾಡಲ್ಲ, ಏನಪ್ಪಾ ಕಾಲಿಗೆ ಹಾಕೋ ಚಪ್ಪಲಿ ಏನ್ ಮಾತಾಡುತ್ತೆ, ಅದರಲ್ಲಿ ಏನು ವಿಶೇಷ ಅಂತ ನೀವು ಯೋಚನೆ ಮಾಡ್ತಾ ಇದ್ರೆ ನಿಮಗಿನ್ನೂ ನನ್ನ ಇತಿಹಾಸ ಗೊತ್ತಿಲ್ಲ ಅನ್ಸುತ್ತೆ. ಅದಿಕ್ಕೆ ಬಂದೆ ನನ್ನ ಇತಿಹಾಸ ಹೇಳೋಕೆ.

ಏನು ಚಪ್ಪಲಿಗೂ ಇತಿಹಾಸ ಇದೀಯಾ? ಅಂತ ನಿಮ್ಮ ತಲೆಗೆ ಬಂದ್ರೆ ಕೇಳಿ ಇಲ್ಲಿ, ನನ್ನ ಇತಿಹಾಸ ಪ್ರಾರಂಭ ಆಗೋದು ಸುಮಾರು 12ನೇ ಶತಮಾನದಿಂದ ದಕ್ಷಿಣ ಸಾಂಮ್ರಾಜ್ಯ ವಂಶದ ಅಧಿಕಾರಿಯೊಬ್ಬರು ಚಪ್ಪಲಿಗಳನ್ನು ಮೊದಲು ದಾಖಲಿಸಿದರು. ಆದರೆ ಪಶ್ಚಿಮದಲ್ಲಿ ಇದರ ದಾಖಲೆ ಪ್ರಾರಂಭವಾಗಿದ್ದು 1478 ರಲ್ಲಿ. ನನ್ನನ್ನು ಕನ್ನಡದಲ್ಲಿ ಚಪ್ಪಲಿ, ಪಾದರಕ್ಷೆ, ಸಂಸ್ಕೃತದಲ್ಲಿ ಪಾದುಕೆ ಹಿಂದಿಯಲ್ಲಿ ಜುತ್ ಇಂಗ್ಲಿಷ್ ನಲ್ಲಿ ಸ್ಲಿಪ್ಪರ್ ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದು ಇದು ಫ್ರೆಂಚ್ ಭಾಷೆಯ ಪ್ಯಾಂಟೌಫಲ್ ಎಂಬ ಮೂಲ ಪದದಿಂದ ಬಂದಿದೆ.

ಚೀನಾದಲ್ಲಿ ಕ್ರಿ. ಪೂ 4700 ಹಿಂದೆಯೇ ನಾನು ತಯಾರಾಗಿದ್ದು, ಹತ್ತಿ ಅಥವಾ ನೇಯ್ದ ರಶ್ ಓದುಕೆಯಿಂದ ತಯಾರಾಗುತ್ತಿದ್ದೆ .ಅಷ್ಟೇ ಅಲ್ಲದೆ ಅಮೆರಿಕಾ ಮಾಕ್ಸಿನ್ ಗಳಲ್ಲಿ ಸಹ ಹೆಚ್ಚು ಜನಪ್ರಿಯವಾಗಿದ್ದೆ. ಓ ಓ ಇಷ್ಟೇನಾ ನಿನ್ನ ಇತಿಹಾಸ ಅಂದುಕೊಳ್ಳುತ್ತಾ ಇರಬಹುದು. ಇದೇನ್ ಬಿಡ್ರಿ ಜಸ್ಟ್ ದಾಖಲಾಗಿರೋದು ಅಷ್ಟೇ, ಆದ್ರೆ ನನ್ನ ಜನ್ಮರಹಸ್ಯ ತುಂಬಾ ದೊಡ್ಡದಾಗಿ ಇದೆ, ಅವುಗಳ ದಾಖಲೆಯ ವರ್ಷ ನೆನಪಿಲ್ಲ ಅಷ್ಟೇ. ಆಗ ಲಿಖಿತ ದಾಖಲೆ ಕಡಿಮೆ ಅಲ್ವಾ ಅದಕ್ಕೆ ಸಿಕ್ಕಿಲ್ಲ. ಆದರೆ ನಾನು ಹೇಳೋದು ಯಾವುದು ಸುಳ್ಳಲ್ಲ ಯಾಕೆಂದರೆ ಅವೆಲ್ಲ ದಾಖಲಾಗಿರೋದು ಮಹಾಭಾರತ ರಾಮಾಯಣ ಕಾಲದಲ್ಲಿ.

**ರಾಮಾಯಣ:**

ಇದೇನಪ್ಪಾ ಚಪ್ಪಲಿಗೂ ರಾಮಾಯಣಕ್ಕು ಏನ್ ಸಂಬಂಧ, ಏನು ಸರಿನೆ ಹೋಗ್ತಿಲ್ಲ ಅಂತ ಯೋಚನೆ ಮಾಡ್ತಾ ಇದ್ದೀರಾ, ಹೇಳ್ತೀನಿ ಕೇಳಿ. ಅದು ನನಗೆ ಪರಮೋಚ್ಚ ಗೌರವ ಸಿಕ್ಕ ಕಾಲ, ಇಡೀ ರಾಜ್ಯವನ್ನೇ ರಾಜ್ಯಭಾರ ಮಾಡಿದ ಕಾಲ, ಅದೇನಪ್ಪ ಕಥೆ ಅಂದ್ರೆ, ಶ್ರೀರಾಮಚಂದ್ರರು ವನವಾಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಲಕ್ಷ್ಮಣನು ಅವರ ಜೊತೆ ಇದ್ದ ಕಾರಣ ಭರತನೆ ರಾಜ್ಯಭಾರ ಮಾಡೋ ಸಂದರ್ಭ ಬರುತ್ತದೆ. ಆ ಸಂದರ್ಭದಲ್ಲಿ ಅಣ್ಣ ಇಲ್ಲದೆ ರಾಜ್ಯಭಾರ ಮಾಡಲು ಒಪ್ಪದ ಭರತ ವನವಾಸದಲ್ಲಿ ಇದ್ದಂತಹ ರಾಮನ ಪಾದುಕೆಗಳನ್ನು ತಂದು ಸಿಂಹಾಸನದ ಮೇಲೆ ಇರಿಸಿ ಶ್ರೀ ರಾಮಚಂದ್ರರು ಮರಳಿ ಬರುವವರೆಗೆ ರಾಜ್ಯಭಾರ ಮಾಡಿದ. ಇದೇ ಕಾಲದಲ್ಲೇ ನನಗೆ ಅತ್ಯುನ್ನತ ಗೌರವ ಮನ್ನಣೆ ಸಿಕ್ಕಿದ್ದು.

**ಮಹಾಭಾರತ:**

ಮಹಾಭಾರತದಲ್ಲಿ ಏನಾಯ್ತು ಅಂದ್ರೆ ನನ್ನಿಂದ ಅರಮನೆಯಲ್ಲಿ ಇರಬೇಕಾದ ನಾಯಿ ಬೀದಿಯಲ್ಲಿ ಇರಬೇಕಾಯಿತು ಏನಪ್ಪಾ ಅದು ಕತೆ ಅಂದ್ರೆ ಪಾಂಡವರು ಮತ್ತು ದ್ರೌಪದಿಯ ನಡುವೆ ಒಂದು ಒಪ್ಪಂದ ಆಗಿತ್ತು ಅದು ಏನಂದ್ರೆ ದ್ರೌಪತಿಯ ಜೊತೆ ಅಂತಪುರದಲ್ಲಿ ಒಬ್ಬನೇ ಪಾಂಡವ ಇರಬೇಕು. ಒಬ್ಬರು ಇರುವಾಗ ಇನ್ನೊಬ್ಬರು ಪ್ರವೇಶಿಸುವಂತಿರಲಿಲ್ಲ. ಆದರೆ ಒಂದು ದಿನ ರಾಜ್ಯದಲ್ಲಿ ಏನೋ ತೊಂದರೆ ಆಗಿದೆ ಎಂದು ಅರ್ಜುನನು ತನಗೆ ಅರಿವಿಲ್ಲದೆ ಯುಧಿಷ್ಠಿರ ಇರುವಾಗಲೇ ದ್ರೌಪದಿಯ ಅಂತಃಪುರವನ್ನು ಪ್ರವೇಶಿಸಿ ಶಸ್ತ್ರಾಸ್ತ್ರಗಳನ್ನು ತೆಗೆದುಕೊಳ್ಳುತ್ತಾನೆ.

ಆದರೆ ಇದು ಒಂದು ದೊಡ್ಡ ಅಪರಾಧವಾಗಿರುತ್ತದೆ. ಹಾಗಾಗಿ ಅರ್ಜುನ ವನವಾಸಕ್ಕೆ ತೆರಳುತ್ತಾನೆ, ಇಷ್ಟಕ್ಕೆಲ್ಲ ಕಾರಣ ಏನೆಂದರೆ ಯುಧಿಷ್ಠಿರ ಅನಂತಪುರದ ಹೊರಗಡೆ ಬಿಟ್ಟಂತಹ ಚಪ್ಪಲಿಯನ್ನು ನಾಯಿ ಕಚ್ಚಿಕೊಂಡು ಹೋಗಿರುತ್ತದೆ. ಆದ ಕಾರಣ ಇದರಿಂದ ಕೋಪಗೊಂಡಂತಹ ದ್ರೌಪದಿ ನಾಯಿಗಳ ಎಲ್ಲಾ ಕ್ರಿಯೆಗಳು ಬೀದಿಯಲ್ಲಿ ನಡೆಯಬೇಕು ಎಂದು ಶಾಪವನ್ನು ನೀಡುತ್ತಾಳೆ, ನೋಡುದ್ರಾ ಆಗ ನನ್ನ ಪ್ರಾಮುಖ್ಯತೆ ಎಷ್ಟಿತ್ತೆಂದು.

ಸಿಂಡ್ರೆಲ್ಲಾ ಗಾಜಿನ ಚಪ್ಪಲಿಗಳು: ನನ್ನ ಮಹತ್ವ ಕೇವಲ ರಾಮಾಯಣ ಮಹಾಭಾರತ ಅಷ್ಟಕ್ಕೆ ಅಲ್ಲ. ಕಾಲ್ಪನಿಕ ಕಥೆಗಳಲ್ಲೂ ಇದೆ. ನಿಮಗೆ ಗೊತ್ತಲ್ಲ ಸಿಂಡ್ರೆಲ್ಲಾ ಅನ್ನೋ ಬಡ ಹುಡುಕಿ ನನ್ನ ಗಾಜಿನ ಚಪ್ಪಲಿ ಧರಿಸಿ ಕೊನೆಗೆ ರಾಜಕುಮಾರನನ್ನೇ ಮದುವೆಯಾದ ಘಟನೆ ಆಗಲೇ ನಾನು ವರ್ಷನನ್ನು ಪಡೆದಿದ್ದೆ.

ಇದೆಲ್ಲವೂ ನನ್ನ ಪೂರ್ವ ಇತಿಹಾಸ. ಆದ್ರೆಆಗ ನಾನು ಎಲ್ಲರಿಗೂ ಸಿಗುವುದು ಕಡಿಮೆ  ನನಗೆ ಈಗ ಡಿಮ್ಯಾಂಡ್ ಏನು ಕಡಿಮೆ ಇಲ್ಲಬಿಡಿ. ನಾನು ಸಹ ನಾನಾ ಅವತಾರಗಳನ್ನು ತಾಳುತ್ತ ಇದ್ದೇನೆ, ಫುಟ್‌ಪಾತ್ ನಿಂದ ಹಿಡಿದು ದೊಡ್ಡ ದೊಡ್ಡ ಶೋರೂಮ್ ಗಳಲ್ಲೂ ಸಹ ನಾನು ಇರುತ್ತೇನೆ, ನನಗೆ ಅಂತಾನೇ ಎಷ್ಟೋ ಬ್ರಾಂಡ್ ಗಳಿವೆ, ಹೆಸರುಗಳಿವೆ. ಹಾಗೆಯೇ ಆಕಾರಗಳು ಸಹ ಇವೆ, ನನ್ನನ್ನು 50 ರೂನಿಂದ ಹಿಡಿದು 50 ಲಕ್ಷದವರೆಗೂ ಕೊಂಡುಕೊಳ್ಳುವವರು ಇದ್ದಾರೆ. ಅಷ್ಟೇ ಏಕೆ ಕೆಲವು ಶ್ರೀಮಂತರು ಚಿನ್ನ ಬೆಳ್ಳಿಯಿಂದನು ಮಾಡಿಸಿಕೊಳ್ಳುತ್ತಾರೆ. ಇದೆಲ್ಲ ಖುಷಿ ನಂಗೆ.

ಆದ್ರೆ ನಮಗೂ ಒಂದು ದುಃಖ ಇದೆ. ಏನಪ್ಪಾ ಅಂದ್ರೆ ನನ್ನನ್ನ ಪ್ರಾಣಿಗಳ ಚರ್ಮದಿಂದ ತಯಾರಿಸುತ್ತಾ ಇದ್ದರು. ನಿಮಗೂ ಗೊತ್ತೇ ಇದೆ ಬಸವಣ್ಣನವರಿಗೆ ಹರಳಯ್ಯ ತನ್ನ ಚರ್ಮದಿಂದನೇ ಚಪ್ಪಲಿ ಮಾಡಿ ಕೊಟ್ಟಿದ್ದು, ಅದೇ ರೀತಿ ಎಷ್ಟೋ ಪ್ರಾಣಿಗಳನ್ನು ಅದಕ್ಕೆ ಕೊಲ್ಲುತ್ತಾ ಇದ್ದಿದ್ದು ಅಥವಾ ಅವುಗಳ ಚರ್ಮವನ್ನು ನನ್ನನ್ನ ತಯಾರಿಸಲಿಕ್ಕೆ ಬಳಸ್ತಾ ಇದ್ದಿದ್ದು ನನಗೆ ತುಂಬಾ ದುಃಖ ಕೊಟ್ಟಂತಹ ವಿಷಯ ಆದ್ರೆ ಅದೇ ಸಮಯಕ್ಕೆ ನಮ್ಮ ವಿಜ್ಞಾನಿಗಳು ಪ್ಲಾಸ್ಟಿಕ್ ನಿಂದ ನನ್ನ ತಯಾರಿಸಲು ಪ್ರಾರಂಭಿಸಿದ್ರು. ಇದು ಸ್ವಲ್ಪ ನನ್ನ ದುಃಖಾನ ಕಡಿಮೆ ಮಾಡ್ತು, ನೀವು ಅಂದುಕೊಳ್ಳುತ್ತಿರಬಹುದು ಆಗಿದ್ರೆ ಪ್ಲಾಸ್ಟಿಕ್ ಏನು ಹಾನಿ ಮಾಡಲ್ವಾ ಅಂತ. ಹೌದು ಹಾನಿಕಾರಕವೆ, ಇತ್ತೀಚೆಗೆ ನೈಸರ್ಗಿಕವಾಗಿಯೂ ನನ್ನನ್ನು ತಯಾರಿಸುತ್ತಿದ್ದಾರೆ.

ಹಾಗಿದ್ರೆ ಇನ್ನೇನ್ ಚಿಂತೆ ಇಲ್ಲ ಅಂದಾಗ ನನಗೆ ಯಾವಾಗಲೂ ಒಂದು ಬೇಸರ ಇತ್ತು ನಾನು ಮನುಷ್ಯನಿಗೆ ಯಾವುದೇ ತೊಂದರೆ ಆಗದೆ ಕಾಲಿಗೆ ಏನು ಚುಚ್ಚಲು ಬಿಡದೆ, ಬಿಸಿಲಲ್ಲಿ ಕಾಲು ಸುಡುವುದಂಗೆ, ಕೆಸರಲ್ಲಿ ಕಾಲು ಗಲೀಜ್ ಆಗ್ದೇ ಇದ್ದಂಗೆ ನಾನು ಅವರನ್ನು ಕರೆದುಕೊಂಡು ಬರ್ತೀನಿ. ಅವರು ಸಹ ಅಲ್ಲಿವರ್ಗೂ ನನ್ನ ಮರೆಯದೆ ಇರೋರು ಮನೆ ಬಾಗಿಲಿಗೆ ಬಂದ ತಕ್ಷಣ ಮರ್ಯಾದೆನೇ ಕೊಡ್ತಾ ಇರ್ಲಿಲ್ಲ. ಬಾಗಿಲಲ್ಲೇ ನನ್ನ ಅನಾಥ ಮಾಡಿ ಹೋಗ್ತಾ ಇದ್ರು, ಈ ಜನರೇಶನ್ ಆಗಿಲ್ಲ ನನ್ನ ಮನೆ ಒಳಗಡೆ ಎಲ್ಲ ಓಡಾಡಿಸ್ತಾರೆ, ಯಾವಾಗಲೂ ನನ್ನನ್ನು ಉಪಯೋಗಿಸ್ತಾ ಇರ್ತಾರೆ ಅದು ನನಗೆ ತುಂಬಾ ಖುಷಿ.

ಇದೆಲ್ಲ ನನ್ನ ಇತಿಹಾಸ. ನನ್ನ ಇತಿಹಾಸ ಕೇಳಿ ಬೋರಾಯ್ತು ಆಗಿದ್ರೆ ನನ್ನ ಆಸೆ ಹೇಳ್ತೀನಿ ಕೇಳಿ. ನಾನು ಎಲ್ಲರ ಕಾಲನ್ನು ಅವರಿಗೆ ಯಾವುದೇ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು ಹೇಗಂದ್ರೆ ಅಮ್ಮ ಅವರ ಮಕ್ಕಳನ್ನು ನೋಡಿಕೊಳ್ಳುವ ಹಾಗೆ ಮತ್ತೆ ನಾನು ಎಲ್ಲರನ್ನು ರಕ್ಷಣೆ ಮಾಡಬೇಕು. ಹೇಗೆ ಅಪ್ಪ ಮಕ್ಕಳನ್ನು ಜೋಪಾನ ಮಾಡೋ ಹಾಗೆ ನನ್ನ ಬೆಲೆ ತುಂಬಾ ಕಡಿಮೆಯಾಗಬೇಕು. ಯಾಕಂದ್ರೆ ನಾನು ಎಲ್ಲರಿಗೂ ಸಿಗಬೇಕು. ನನ್ನ ಗುಣಮಟ್ಟ ಇನ್ನು ಜಾಸ್ತಿ ಆಗ್ಬೇಕು. ಯಾಕಂದ್ರೆ ನಾನ್ ತುಂಬಾ ದಿನಗಳ ಕಾಲ ಬದುಕ್ಬೇಕು. ನನ್ನ ಎಲ್ಲರೂ ಉಪಯೋಗಿಸ್ಬೇಕು. ಯಾಕಂದ್ರೆ ಅವರ ಸುರಕ್ಷಣೆ ನನ್ನ ಹೊಣೆ.

– ಇಂತಿ ನಿಮ್ಮ ಚಪ್ಪಲಿ.



Keerthana K
2nd Year B A

## ಅವಳೆಂದರೆ ನನ್ನವಳು

ಅವಳೆಂದರೆ, ನನ್ನವಳು
ಅಪರೂಪದ ಗುಣದವಳು
ಅನಿರೀಕ್ಷಿತವಾಗಿ ಸಿಕ್ಕಿದವಳು
ಇಂದು ಅವಳೇ ಅಂತವಳು
ಯಾವಾಗಲೂ ನನ್ನ ಜೊತೆಗಿರುವವಳು
ಗೆಳೆತನದಲ್ಲಿ ನಂಬಿಕೆ ತಂದವಳು
ನನ್ನ ಸಣ್ಣ ಬದಲಾವಣೆಯನ್ನು ಕಂಡುಹಿಡಿಯುವವಳು
ಮಗುವಂತೆ ಕಾಳಜಿ ಮಾಡುವವಳು
ಎಲ್ಲ ಸಂದರ್ಭದಲ್ಲೂ ಕೈ ಹಿಡಿದು ಜೊತೆಗಿರುವವಳು
ನನ್ನಿಂದ ಏನನ್ನು ನಿರೀಕ್ಷಿಸದೇ ಪ್ರೀತಿಸುವವಳು
ನನಗೆ ದೇವರು ಕೊಟ್ಟಿರುವ ಅದ್ಭುತ ಉಡುಗೊರೆ ಅವಳು
ನನ್ನ ಬದುಕಿನ ಪುಸ್ತಕದಲ್ಲಿ ಸುಂದರ ಅಧ್ಯಾಯ ಅವಳು
ಎಲ್ಲ ಜನ್ಮಕ್ಕೂ ಗೆಳತಿಯಾಗಲಿ ಎಂದು ಬಯಸುವಂತಹ ಗುಣ ಅವಳದು
ನಾ ಅವಳಿಗಾಗಿ ಏನನ್ನೂ ಮಾಡಿಲ್ಲದಿದ್ದರೂ ಪ್ರೀತಿಸುವಳು
ಮುಗ್ಧ ಮನಸ್ಸಿನ ಸುಂದರ ದೇವತೆ ಅವಳು



Keerthana K
2nd Year B A

ನೀ ತಿಂದು ಎಸೆದ ರಸವತ್ತಾದ ರಾಶಿ ಕಸ
ಮರದ ಬುಡವ ಕಡಿದ ನೆರಳ ಕುರುಹು
ವಿಷದ ಹೊಗೆಯ ನಗುವ ಆ ಮುಗುಳ್ನಗು
ಬರದ ಬಿಸಿಲ ಜ್ವಾಲೆಯು ಬಿಸಿ ಆ ಅಪ್ಪುಗೆ
ನಿನ್ನ ಸ್ವಾರ್ಥದ ಸುಂದರ ಆ ಕಪ್ಪು ಕನಸು
ಅಸ್ಥಿಪಂಜರ ವಾಸ ನಿನಗೆ ಯಾರು ನೆರಳು?

ಬಿಟ್ಟು ಬಿಡು ಜಗವ, ಅದರೊಟ್ಟಿಗೇಕೆ ನಿನ್ನ ಜಗಳ
ನಿನ್ನ ಬೇಡಿಕೆಗೆ ಬದುಕ ಸವೆಸಿ ಎಣಿಸುತ್ತಿದೆ ದಿನಗಳ
ಕಳುಹಿಸಿ ಪಾತಾಳಕ್ಕೆ ಜಲದಾರೆ ಕೆಡುಹಿಸಿ ಮರಗಳ
ಬಿಸಿಲ ಕೆನ್ನಾಲಿಗೆಗೆ ಬೆಂದು ಬದುಕಬೇಕೇನು ಈ ದಿನಗಳ



**ಭವ್ಯ ಕೆ ಪಿ**
**3rd Year B.Com**

## ದೇವರು

ದೇವರು ಜಾಗ ಬದಲಿಸಿದ್ದಾನೆ
ಗುಡಿಯ ಬಯಲ ಬಂದಿಯಲ್ಲಿಲ್ಲದೆ
ಬಂಗಾರದ ಒಡವೆಯ ಅಲಂಕರಿಸದೆ
ಮುಡಿಗೆ ಮಡಿಯ ಮಲ್ಲಿಗೆ ಮುಡಿಯದೆ
ಮಾನವೀಯತೆಯ ಮುಗಳ್ನಗೆಯಲ್ಲಿದ್ದಾನೆ

ದೇವರು ಜಾಗ ಬದಲಿಸಿದ್ದಾನೆ
ಬಡವ ಶ್ರೀಮಂತರ ಬೇಧವಿಲ್ಲದೆ
ಮೇಲು ಕೀಳು ಎಂಬ ಅರಿವು ಮೂಡಿಸದೆ
ಕುರುಡು ಭಕ್ತಿಯ ಕಾಂಚಣಕೆ ಬೆರಗಾಗದೆ
ನೀ ಮಾಡುವ ಕಾಯಕದ ಕರ್ಮದಲ್ಲಿದ್ದಾನೆ

ದೇವರು ಜಾಗ ಬದಲಿಸಿದ್ದಾನೆ
ಸೂರ್ಯನ ಕಿರಣದಲ್ಲಿ ಪ್ರಜ್ವಲಿಸಿ
ಅರಿವ ನೀರ ಜರಿಯ ಸಪ್ಪಳದಲ್ಲಿ
ಮರದ ಗಾಳಿಯ ಉಸಿರಿನಲ್ಲಿ ಬೆರೆತು
ಪ್ರಕೃತಿಯ ಉಳಿಸಿ ಎಂದು ಬೇಡುತ್ತಿದ್ದಾನೆ.



**ಪೂರ್ವಿಶ್ರೀ ಕೆ**
**3rd Year B.Com**

# ನಮ್ಮ ಊರು ನಮ್ಮ ಹೆಮ್ಮೆ

ತಿಪಟೂರು ಭಾರತದ ಕರ್ನಾಟಕ ರಾಜ್ಯದಲ್ಲಿರುವ ಒಂದು ನಗರ. ಇದು ತುಮಕೂರು ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರ. ಈ ನಗರವು ಏಷ್ಯದಲ್ಲಿಯೆ ಅತಿ ದೊಡ್ಡ ಕೊಬ್ಬರಿ ಮಾರುಕಟ್ಟೆಯನ್ನು ಹೊಂದಿದೆ. ಇದು ಕಲ್ಪತರು ನಾಡು ಎಂದೇ ಪ್ರಸಿದ್ಧಿಯಾಗಿದೆ. ವಿಶ್ವದಲ್ಲಿಯೇ ಅತಿ ಹೆಚ್ಚು ತೆಂಗು ಬೆಳೆಯುವ ದೇಶವಾದ ಫಿಲಿಪೈನ್ಸ್ ನಗರದ ಕೊಬ್ಬರಿಗಿಂತಲೂ ಈ ನಗರದಲ್ಲಿ ಬೆಳೆಯುವ ಕೊಬ್ಬರಿಗೆ ಭಾರಿ ಬೇಡಿಕೆ ಇದೆ. ಇದಕ್ಕೆ ಕಾರಣ ಇಲ್ಲಿನ ಕೊಬ್ಬರಿಗಿರುವ ವಿಶೇಷ ರುಚಿ.

ಐತಿಹಾಸಿಕವಾಗಿ ಈ ಪಟ್ಟಣಕ್ಕೆ ತಿಪಟೂರು ಎಂಬ ಹೆಸರು ಬರಲಿಕ್ಕೆ ಕಾರಣ ಇಲ್ಲಿನ ಅಣತಿ ದೂರದಲ್ಲಿರುವ ನೊಣವಿನಕೆರೆ ಕಲ್ಲೇಶ್ವರ ದೇಗುಲದಲ್ಲಿ ನೊಳಂಬ ರಾಜರಿಗೆ ಪಟ್ಟಕಟ್ಟಿದ್ದು. ಮೂರು ರಾಜರಿಗೆ ಪಟ್ಟಕಟ್ಟಿದ ತ್ರಿಪಟ್ಟದೂರು ಬರುಬರುತ್ತಾ ಜನರ ಬಾಯಲ್ಲಿ ತಿಪಟೂರು ಎಂದಾಗಿದೆ. ಇದು ಕೊಬ್ಬರಿಗೆ ಬಹು ಪ್ರಸಿದ್ಧಿಯಾಗಿದೆ. ಇದಲ್ಲದೆ ತಿಪಟೂರು ಒಂದು ಪ್ರಮುಖ ಶೈಕ್ಷಣಿಕ ಕೇಂದ್ರ. ಇಲ್ಲಿರುವ ಕಲ್ಪತರು ವಿದ್ಯಾಸಂಸ್ಥೆ ಬಹಳ ಶೈಕ್ಷಣಿಕ ಕೇಂದ್ರಗಳನ್ನು ತೆರೆದಿದೆ. ಇದೇ ಸಂಸ್ಥೆಯು ಇಲ್ಲಿ ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜನ್ನು ಹೊಂದಿದೆ.

**ಕಲ್ಪತರು ನಾಡು, ತಿಪಟೂರು ನಮ್ಮ ಬೀಡು.**



**ನಿಶ್ಚಿತ ಎನ್ ಹೆಚ್**
**1st Year B.Com**

# ಪ್ರಕೃತಿಯ ಮೆರುಗು

ಎತ್ತ ನೋಡಿದರೆ ಎತ್ತ ಸಾಗುತಿದೆ ಮೋಡಗಳ ರಾಶಿ ಕತ್ತಲಿನ ರೂಪದಲ್ಲಿ ಮೋಡಗಳು ಕಂಗೊಳಿಸುತ್ತಿದೆ. ಇಳೆಯು ಕಾಯುತ್ತಿದೆ ಆ ಸುಂದರಗಳಿಗೆಗಾಗಿ, ಸುರಿ ಮಳೆಯು ಸುರಿದು, ಭೂಮಿಯು ಹಸನಾಗಿ ಮಣ್ಣಿನವಾಸನೆಯು ಗಮಗಮಿಸುತಿದೆ. ಆ ತುಂತುರು ಮಳೆಯ ಬೇಗೆಗೆ ಹಸಿರು ಚಿಗುರೊಡೆದು ನವರಂಗಿಸುತಿದೆ. ಹಸಿರು ಸೀರೆಯನ್ನುಟ್ಟು ಕಂಗೊಳಿಸುತ್ತಿದ್ದಾಳೆ ವನ ದೇವತೆಯು, ರೈತನ ಮೊಗದಲಿ ಕಾಣುತಿದೆ ಕಿರುನೋಟದ ಸಂತೋಷ: ಪ್ರಕೃತಿಯು ರಸದೌತಣವನ್ನು ಉಣಪಡಿಸುತಿದೆ, ಅದರ ಸೊಬಗನ್ನು ಸವಿದವರೆ ಬಲ್ಲ ಸವಿಯ. .

# ಭರವಸೆಯೇ ಬದುಕು

ಬದುಕು ಒಂದು ನಂಬಿಕೆಯ ಮರ. ಬೇಸಿಗೆಯ ಸಮಯದಲ್ಲಿ ಎಲ್ಲಾ ಎಲೆಗಳು ಉದುರಿ ಅದು ಪೂರ ತನ್ನ ನಂಬಿಕೆಯನ್ನು ಕಳೆದುಕೊಂಡು ನಿಂತಿರುತ್ತದೆ. ಅದೇ ವಸಂತ ಮಾಸದ ಕಾಲದಲ್ಲಿ ಅದೇ ಮರದಲ್ಲಿ ತುಂಬಾ ಎಲೆಗಳು ಚಿಗುರಿ ಹಸಿರು ಸೀರೆಯನುಟ್ಟು ಹೆಣ್ಣು ಮಗಳಂತೆ ಕಂಗೊಳಿಸುತ್ತಾ ಎಲ್ಲರಿಗೂ ಆಕರ್ಷಣೀಯವಾಗಿ ಕಾಣಿಸುತ್ತದೆ. ಅದೇ ರೀತಿ ಜೀವನದಲ್ಲಿ ಎಷ್ಟು ಕಷ್ಟ ಬಂದರು ಒಳ್ಳೆಯ ಸಮಯಕ್ಕಾಗಿ ಕಾಯುವುದು ಬಹಳ ಮುಖ್ಯ.. ಭರವಸೆಯನ್ನು ಅರಿತು ಮುಂದೆ ಸಾಗಿದ ಎಲ್ಲರೂ ಒಂದಲ್ಲ ಒಂದು ದಿನ ನಮ್ಮ ಸಾಧನೆಯತ್ತ ನೋಡುವ ಸಮಯ ಬಂದೇ ಬರುತ್ತದೆ.



**Tanuja**
**3rd Year B A**

## ಪಕೃತಿಯ ನಿಲಯದಲ್ಲಿ

ಪ್ರಕೃತಿಯ ಮಡಿಲು ತುಂಬಾ ವಿಶಾಲವಾದುದು,
ಅದು ಎಲ್ಲರನ್ನು ತನ್ನೆಡೆ ಸೆಳೆಯುತ್ತದೆ.

"ಏಕಾಂತ ಪಯಣದಲ್ಲಿ, ದಟ್ಟನೆಯ ಕಾಡಿನಲ್ಲಿ
ಗಿಡಮರಗಳ ನಡುವೆ ತಣ್ಣನೆಯ ಗಾಳಿಯಲ್ಲಿ
ಹಚ್ಚಹಸಿರಿನಿಂದ ತುಂಬಿರುವ ಬೆಟ್ಟಗುಡ್ಡಗಳಲ್ಲಿ
ಇಂಪಾದ ಪಕ್ಷಿಗಳ ಚಿಲಿಪಿಲಿಯಲ್ಲಿ
ದುಂಬಿಗಳನ್ನು ಸೆಳೆಯುವ ಹೂವುಗಳು
ಝುಳು ಝುಳು ಎಂದು ಹರಿಯುವ ನೀರಿನಲ್ಲಿ
ಮಳೆಯು ಸುರಿಯುವ ಮಣ್ಣಿನ ಸುವಾಸನೆಯಲ್ಲಿ
ಪ್ರಕೃತಿಯ ಸೊಬಗು ಅಡಗಿದೆ.
ಹಲವಾರು ಜೀವರಾಶಿಗಳನ್ನು ತನ್ನ ಮಡಿಲಿನಲ್ಲಿ ಹೊತ್ತಿದೆ".

ಪ್ರಕೃತಿಯು ಕೇವಲ ಪದಗಳಲ್ಲಿ ವರ್ಣಿಸುವ ಪದವಲ್ಲ
ನಮ್ಮ ಅಂತರಾತ್ಮ ಅದರಲ್ಲಿ ಬೆರೆತಾಗ ಮಾತ್ರ,
ಪ್ರಕೃತಿಯು ತನ್ನ ಮಡಿಲಲ್ಲಿರುವ
ಸ್ವರ್ಗದ ರುಚಿಯನ್ನು ತೋರಿಸುತ್ತದೆ.
**"ಪ್ರಕೃತಿಯು ಧರೆಗಿಳಿದ ಸ್ವರ್ಗ"**



**Manya N**
**1st Year B.Com**

## ಅಮ್ಮ

ಸೂರ್ಯ ಮುಳುಗಿದನೆಂದು ಮರುಗಬೇಡ
ಅವನು ಮುಳುಗುವನೆಂದೆ ಅವಳನ್ನು ಸೃಷ್ಟಿಸಿದ
ದೇವರು ಕಾಪಾಡಲಿಲ್ಲ ಎಂದು ಶಪಿಸಬೇಡ
ಅವನು ಬರುವುದಿಲ್ಲವೆಂದು ಅವಳನ್ನು ಸೃಷ್ಟಿಸಿದ

ಭೂಮಿಗೆ ನೀ ಬರುವ ಮೊದಲೇ ಅವಳು
ನಿನ್ನ ನೋವನೆಲ್ಲ ನುಂಗಿ ನಿನ್ನ ಹಡೆದಳಲ್ಲ
ಅವಳಿಗಾಗಿ ನೀನೇನು ಕೊಡಬೇಡ
ಅವಳ ಕಣ್ಣ ರೆಪ್ಪೆಯಿಂದ ನೀ ದೂರ ಹೋಗಬೇಡ

ಅವಳ ಕೈ ರೇಖೆಯನೊಮ್ಮೆ ಇಣಕಿ ನೋಡು
ನಿನ್ನ ಖುಷಿಯದಾರಿಗೆ ಅವಳು ಸವೆಸಿದಳಲ್ಲ
ಅವಳಿಗಾಗಿ ನೀನೇನು ಕೊಡಬೇಡ
ನಿನ್ನ ತುಟಿಯ ಅಮ್ಮ
ಎನ್ನೋ ಪದ ಬಯಸಿರುವಳಲ್ಲ.......



**ಸುಶ್ಮಿತ ಕೆ. ಎಸ್**
**3rd Year B.Com**

## ಬೀದಿ ದೀಪದ ಸ್ವಗತ

ಕಡುಗತ್ತಲಿನ ಏಕಾಂತದಲ್ಲಿ ನಾ ನಿಂತಿರುವೆ, ತಂಪಾದ ಗಾಳಿಯು ಬೀಸುತ್ತಾ ಸದ್ದಿಲ್ಲದೆ ಕಳೆಯುತ್ತಿರುವೆ ಇರುಳನು.
ಸಂಜೆಯಲ್ಲಿ ನನ್ನನ್ನು ನೆನೆಯುತ್ತ ಜನ ಕಡುಗತ್ತಲಿನಲ್ಲಿ ನನ್ನ ಇರುವಿಕೆಯನ್ನು ಮರೆಯುತ್ತಾ
ಮುಂಜಾನೆ ನಂದಿಸಲು ಜ್ಞಾಪಿಸುತ್ತ ನಿಂತಿರುವೆ.

ಕಡುಗತ್ತಲಿನ ಹೆದರಿಕೆಯನ್ನು ಮರೆಯುತ್ತಾ, ಶ್ವಾನಗಳ ಶಬ್ದವನ್ನು ಆಲಿಸುತ್ತಾ
ತಂಗಾಳಿಯನ್ನು ಸವಿಯುತ್ತಾ ನಿಂತಿರುವೆ
ಏಕಾಂತದ ಗೆಳೆಯನಾದ ಚಂದ್ರನನ್ನು ನೋಡುತ್ತಾ, ಮಿನುಗುವ ತಾರೆಗಳ ಹಿಂಡನ್ನು
ನೋಡಿ ನಲಿಯುತ್ತಾ ನನ್ನನ್ನು ಹುಡುಕಿ ಬರುವ ಹುಳುಗಳೊಂದಿಗೆ ಸಂಭಾಷಣೆ ನಡೆಸುತ್ತಾ,
ನಾ ನಿಂತಿರುವೆ ಕಡುಗತ್ತಲಿನ ಏಕಾಂತದಲ್ಲಿ....



**Nagesh S M**
**3rd Year B A**

## ನೀನೆಂದು ಚಿರವಲ್ಲ ಎಲೆ ಮಾನವಾ....

ಅಳು ನಗುವ ಧನಿಯಲ್ಲಿ ಮುಳುಗಿದ ನಾದವು
ಮೌನದಿಂದ ಮರೆಯಾಗುವುದು, ಮರಳಿ
ಬರಲು ಮನಸಾದರು ಅದು ನನಸಾಗದು
ನೀನೆಂದು ಚಿರವಲ್ಲ ಎಲೆ ಮಾನವಾ....

ಬಯಸದೆ ಭುವಿಗೆ ಬಂದು, ಬಯಸಿದರು ಭುವಿಯಲ್ಲಿ
ಉಳಿಯಲಾರನು, ನೋವು ನಲಿವಿನ ಜೊತೆಗೆ
ಬದುಕಿ ಬಾಳಿದರು, ಕತ್ತಲಿನ ಕಡೆಗೆ ನಿನ್ನ ಪಯಣ
ನೀನೆಂದು ಚಿರವಲ್ಲ ಎಲೆ ಮಾನವಾ...

ಜೀವನದ ಹಾದಿಯಲ್ಲಿ ಸಿರಿವಂತರಿಲ್ಲ,
ಬಡವರಿಲ್ಲ ಸರ್ವರನ್ನು ಪ್ರೀತಿಸಿದರು, ಅಳುಕದೆ
ಬಾಳಿದರು ಕೊನೆಗೊಂದು ದಿನ ಬೂದಿಯಾಗುವೆ
ನೀನೆಂದು ಚಿರವಲ್ಲ ಎಲೆ ಮಾನವಾ....

ದುಡಿದು ದಣಿವಾದರು ಮತ್ತೆ ಬೆಂಕಿಯಲ್ಲಿ ದೇಹ
ಉರಿಯಲೇ ಬೇಕು, ಕಷ್ಟ ಸುಖಿಯಾದರು
ಅಚಿತ್ಯ ಕಾಲದಲ್ಲಿ ಇಹಲೋಕ ತ್ಯಜಿಸಲೇಬೇಕು
ನೀನೆಂದು ಚಿರವಲ್ಲ ಎಲೆ ಮಾನವಾ....

ಮೊಗ್ಗು ಹೂವಾದ ಮೇಲೆ ಹೇಗೆ ಕಂಗೊಳಿಸಿ
ಬಾಡುತ್ತದೆಯೋ ಹಾಗೆ ಬದುಕ್ಕೆಂಬ ಜೀವನವು
ಉಸಿರು ನಿಂತ ಮೇಲೆ ಕೈ ಜಾರಲೇಬೇಕು, ಎಷ್ಟು
ಗುದ್ದಿ ಗೆದ್ದರು ಸಾವಿಗೆ ಸೋಲಲೇ ಬೇಕು
ನೀನೆಂದು ಚಿರವಲ್ಲ ಎಲೆ ಮಾನವಾ....



**Niveditha N V**
**3rd Year B.Com**

## "ಮಾತು ಮೌನವಾದಾಗ"

ಆಡುವ ಮಾತುಗಳೆಲ್ಲವೂ ಅನರ್ಥವಾಗಿ ಕಂಡಾಗ.
ಕೇಳಿಸಿಕೊಳ್ಳಬೇಕಾದ ಕಿವಿ ಅಪರಿಚಿತನಂತೆ ವರ್ತಿಸಿದಾಗ
ಸ್ಪಂದಿಸಬೇಕಿರೋ ಮನಸ್ಸು ಕಲ್ಲಾಗಿ ಹೋದಾಗ....
ಕೊನೆಗೆ ಉಳಿಯೋದೊಂದೇ
ಈ ಅನಾಥ ಮೌನ.....

ನಿಷ್ಪ್ರಯೋಜಕ ಸಂಬಂಧವನ್ನು ಕಳೆದು.....
ಸುಂದರ ಬಾಂಧವ್ಯಂದನ್ನು
ಕೈಜಾರದ ಹಾಗೆ ಕೈದುಂಬಿ
ಕೊಟ್ಟಿದ್ದು ಈ ಸುಂದರ ಮೌನ...

ಬದುಕು ಅನುಭವದ ಪೆಟ್ಟು ಕೊಟ್ಟಾಗ
ಆಸೆ ಎಂಬ ಮರಳಿನ ಗೋಪುರಕ್ಕೆ
ನಿರಾಶೆ ಎಂಬ ಅಲೆಯೊಂದು ಅಪ್ಪಳಿಸಿದಾಗ
ಮನಸ್ಸೆಂಬ ಕಪ್ಪನೆಯ ಮಂಟಪದಲ್ಲಿ
ಉಳಿದಿದೊಂದೇ ಮೌನ.....

ಹುಟ್ಟಿನಿಂದಲೇ ಬಂದ ತೊದಲ ಮಾತೊಂದು ಮೌನ.
ಸತ್ತಾಗ ಉಳಿದ ಕೊನೆಯ ಮಾತದು ಮೌನ.
ಸ್ವಾರ್ಥದ ಜಗತ್ತಿನಲ್ಲಿ ನಿಸ್ವಾರ್ಥದ
ಮನದಾಳದ ಮಾತೊಂದು ಮೌನ
ಆ ಮೌನದ ಜಗತ್ತು
ಎಂದೆಂದೂ..... ಪರಿಪೂರ್ಣ

ಇಂತಿ
ಮೌನಿ...



**Pallavi R**
**1st Year B.Com**

## ಕಲಾವಿದ

ಉಭಯಮುಖದೀ ನಗುವ ಜೀವಾತ್ಮವಾಗಿಹೆ,
ಧೈರ್ಯ ತುಂಬುವ ಸ್ಥೈರ್ಯ ನೀನಾಗಿಹೆ
ಕಡಲಿನಾಳದ ಕರಿಯ ಕಪ್ಪೆಚಿಪ್ಪಿನೊಳಡಗಿಹ
ಅಪರೂಪದಿ ಸಿಗುವ ಬೆಲೆಗೆ ಸಿಗದ ಬಿಳಿಯ ಮುತ್ತು ನೀ
ಇಲ್ಲಿ ನೀನಿಲ್ಲ ನಿನ್ನ ನೆರಳಿದೆ.
ನಿನ್ನ ನಗುವಿನಲ್ಲಿ ನಗುವಿನ ಅಲೆಗಳಿವೆ
ಸಾಧನ ನೀನು ಸಾಧಕ ನಾನು ಬಂಧನ ಬಲವಾಗಿಸೋ
ಮಾತಿಗೆ ಸೋಲದ ಪ್ರೀತಿಗೆ ಬಾಗುವ ವಾಗ್ಮಿ ನೀ
ಮನುಷ್ಯ ಮನುಷ್ಯನ ಆತ್ಮ ಬೆಸೆಯಲು
ಜೀವಾತ್ಮ ನೀ ಪವಿತ್ರಾತ್ಮ ನೀ
ಕರುಣೆಯ ಕಡಲಿನ ಮಮತೆಯ ಮಡಿಲು ನೀ
ಯಾವ ಭವ ಬಂಧನವೋ ಕಾಣೆ ಈ ಸಂಬಂಧ
ನಗುವ ಬಣ್ಣದ ಜೀವಸೆಲೆಯಾಗಿಹೆಯೋ
ಬದುಕಿನ ಬಣ್ಣದ ಕಲಾವಿದನಾಗಿಹೆಯೋ
ನಗುವೇ ನಿನ್ನ ಶೃಂಗಾರ, ನಗುವೇ ನಿನ್ನ ಮಂದಾರ .......

## ನನ್ನವಳು

ಈಕೆ ನನ್ನ ಜೊತೆಗಾರ್ತಿ
ಇರುವಳು ನನ್ನ ಹೃದಯದ ಪೂರ್ತಿ
ಅವಳೇ ನನ್ನ ಜೀವನದ ಕೀರ್ತಿ
ಪ್ರತಿ ಹೆಜ್ಜೆಯಲ್ಲೂ ಇರುವಳು ನನ್ನ ಬಾಳ ಜ್ಯೋತಿ
ಕಾಯುವೇ ಅವಳಿಗೆ ಜನುಮಪೂರ್ತಿ
ಸಿಗುವುದೇ ಅವಳ ಸಂಪ್ರೀತಿ
ಇದಕಿರುವುದು ಸದಾ ಅವಳ ಸಮ್ಮತಿ
ಅವಳೇ ನನ್ನ ಜೊತೆಗಾರ್ತಿ
ಅವಳೇ ನನ್ನ ಬಾಳ ಸ್ಪೂರ್ತಿ
ಅವಳ ಹೆಸರು ಭಾರತಿ





**Spoorthi R**
**2nd Year B A**
**Opt. Eng & Psychology**

## ಜೀವನ ದಾರಿ....

ಕನಸುಗಳನ್ನು ಕಾಣಲು
ನೀ ಮಲಗಿದರೇ
ನಿನ್ನ ಕನಸುಗಳು ಕೂಡ
ಮಲಗೇ ಇರುತ್ತವೆ....

ಇಲ್ಲಿ ಒಮ್ಮೆ ಕೇಳು ಈ ನನ್ನ ಮಾತನು
ಓ ಮಾನವ.... !
ತಿರುಗೊ ಭೂಮಿಯ ಈ ಗೋಳನು.... !
ಸುಖ – ದುಖಃ ಇಲ್ಲಿ ತೀರದು..... !
ನಿನಗೆ ಸಂಪೂರ್ಣ ನೆಮ್ಮದಿ ಎಂದಿಗೂ
ಸಿಗದು..... !!

ನಿಮ್ಮಲ್ಲಿ ನಿಮ್ಮನ್ನು ಹುಡುಕಿಕೊಳ್ಳಿ
ಇಲ್ಲದಿದ್ದರೆ ಜೀವನಪೂರ್ತಿ
ಬೇರೆಯವರು ತೋರಿದ ದಾರಿಯಲ್ಲಿ
ನಡೆಯಬೇಕಾಗುತ್ತದೆ......



**Tejaswini M S**
**3rd Year B.Com**

## ಮೌನ

ಒಂದು ಪದ ಸಾವಿರ ಭಾವನೆ
ಪ್ರತಿ ಮನಸ್ಸಿನ ಸುಂದರ ಧ್ವನಿ
ಕನಸ್ಸಿಗೂ ವಾಸ್ತವಕ್ಕೂ ಒಂದೇ ಭಾಷೆ
ಅದನ್ನು ತಿಳಿದರೆ ನೀನೇ ಕವಿ

ನಿಮ್ಮನು ನೀವು ಅರಿಯುವ ದಾರಿಯೇ ಮೌನ
ನೋವನ್ನು ಸಂಭ್ರಮಮಿಸುವ ಶಕ್ತಿ ಮೌನ
ಎಷ್ಟೋ ಜ್ಞಾನಿಗಳ ಸೂತ್ರ ಮೌನ
ಪ್ರತಿ ಜೀವಿಗೂ ಅದೇ ಹಸ್ತ ಮೌನ

ಕಣ್ಣಿನ ಮಾತು ಶುರುವಾದಾಗ ಪದಗಳು ಮೌನ
ಕನಸ್ಸಿನ ಮಾತು ಶುರುವಾದಾಗ ಕಾವ್ಯಗಳು ಮೌನ
ಅರಿವು ಹಚ್ಚಾದಾಗ ಗೊಂದಲಗಳು ಮೌನ
ನೆಮ್ಮದಿ ಹೆಚ್ಚದಾಗ ಆಸೆಗಳು ಮೌನ

ತ್ಯಾಗ ಮಾಡಲು ಸಿದ್ದವಾದಾಗ ಬಯಕೆ ಮೌನ
ಆತ್ಮದ ಅರಿವಾದಾಗ ಸೌಂದರ್ಯ ಮೌನ
ಜ್ಞಾನ ಹಚ್ಚಾದಾಗ ಅಹಂಕಾರ ಮೌನ
ಮಹದೇವನ ಇರುವಿಕೆ ತಿಳಿದಾಗ ಎಲ್ಲವು ಮೌನ...



**Ranjitha K**
**3rd Year B.Com**

# ಅಮ್ಮ

ನನ್ನ ಜೀವನದ ಮೊದಲ ಗುರುವಾದವಳು
ನನ್ನ ಜೀವನದ ಮೊದಲ ಗೆಳತಿಯಾದವಳು

ನಾನು ತಪ್ಪು ಮಾಡಿದಾಗ ತಿದ್ದಿ ನಡೆಸಿದವಳು
ನಾನು ಹೆದರಿದಾಗ ಧೈರ್ಯ ಕೊಟ್ಟವಳು

ನನ್ನ ಗೆಲುವಿಗೆ ಸ್ಫೂರ್ತಿ ತುಂಬಿದವಳು
ನನ್ನ ಯಶಸ್ಸಿಗೆ ಕಾರಣಳಾದವಳು

ಹಟ ಮಾಡಿದಾಗ ಪೆಟ್ಟನ್ನು ಕೊಟ್ಟು ನಂತರ ಮುತ್ತಿಟ್ಟು ತುತ್ತು ಕೊಟ್ಟವಳು
ಹಬ್ಬ ಹರಿದಿನಗಳಲ್ಲಿ ನನಗೆ ಅಲಂಕಾರ ಮಾಡಿ ನಂತರ ದೃಷ್ಟಿತೆಗೆದು ಮುದ್ದಾಡಿದವಳು

ತನ್ನ ನೋವನ್ನು ನುಂಗಿ ಮೊಗದಲ್ಲಿ ನಗೆಯನ್ನು ಹೊತ್ತವಳು
ನನ್ನ ನೋವನ್ನು ಹೋಗಲಾಡಿಸಿ, ಖುಷಿಯನ್ನು ಬೀರಿದವಳು

ಕೋಪ ಬಂದಾಗ ಮೌನಿಯಾಗುವವಳು
ಸಂತೋಷವಾದಾಗ ಕುರುಕಲು ತಿಂಡಿ ಮಾಡಿ ಕೊಡುವವಳು

ತನಗಿಲ್ಲದಿದ್ದರು ತನ್ನ ಮಕ್ಕಳಿಗಿರಲಿ ಎಂದು ಬಯಸುವವಳು
ತನ್ನ ಮಕ್ಕಳನ್ನು ಎರಡು ಕಣ್ಣುಗಳೆಂತೆ ಜೋಪಾನ ಮಾಡುವವಳು

ಅತಿಯಾದ ಮಮತೆಯನ್ನು ತೋರುವವಳು
ಹೆಚ್ಚು ಸಹನೆ ಮತ್ತು ತಾಳ್ಮೆ ಉಳ್ಳವಳು

ಸಾಲುಗಳು ಸಾಲದು ವರ್ಣಿಸಲು ಅವಳನ್ನು
ಯಾರಿಂದಲು ಮೀರಿಸಲಾಗದು ಅವಳ ಪ್ರೀತಿ – ಬಾಂಧವ್ಯವನ್ನು

**"ನನ್ನ ಉಸಿರು ನೀನಮ್ಮ , ನಾನು ಸದಾ ಚಿರಋಣಿ ನಿನಗಮ್ಮ"**



**Amrutha G R**
**3rd Year B.Com**

## ಅಪ್ಪ

ಹುಟ್ಟಿದ್ದು ಮಗಳೆಂದೊಡನೆ
ಕಣ್ಣಂಚಲಿ ಖುಷಿಯ ಕಂಬನಿ ಹಾಕಿದವನು
ಜವಾಬ್ದಾರಿಯ ತೇರನ್ನು ಹತ್ತಿದವನು

ಹೋದಲೆಲ್ಲಾ ಮಗಳಿಗಾಗಿ
ಚಂದ ಕಂಡದ್ದೆಲ್ಲಾ ತಂದವನು
ಅವಳ ನಗುವ ನೋಡಿ ತೃಪ್ತಿ ಪಟ್ಟವನು

ತಾನು ರಾಜನಲ್ಲದಿದ್ದರೂ
ಮನೆ ಅರಮನೆಯಂತಿಲ್ಲದಿದ್ದರೂ
ಮಗಳನ್ನು ರಾಜಕುಮಾರಿಯಂತೆ
ನೋಡಿಕೊಂಡವನೂ

ಮಗಳು ಚೆನ್ನಾಗಿರಲಿ ಅಂತ
ಏನೆಲ್ಲಾ ಮಾಡಿದವನು
ಅವನು ಮಗಳ ಪಾಲಿನ ಕಥಾನಾಯಕನು.



**ಮಹಾಲಕ್ಷ್ಮಿ ಆರ್.ಎಸ್.**
**3rd Year B.Com**

## ನನ್ನ ಜೀವನದ ಅನುಭವ

ಬೆವರಿನ ಹನಿ ಬದುಕಿಗೆ,
ದಾರಿ ತೋರಿಸುತ್ತೆ
ಕಣ್ಣೀರಿನ ಹನಿ
ಜೀವನದಲ್ಲಿ ಹೇಗಿರಬೇಕೆಂದು
ಕಲಿಸುತ್ತೆ..... !
ಅದೆ ರೀತಿ
ಅಮ್ಮ ಕೊಡುವ ಪೆಟ್ಟಿನ ನೋವು
ಜೀವನದ ಬುದ್ಧಿ ಕಲಿಸುತ್ತದೆ
ಅಪ್ಪನ ಭಯ ಜೀವನದ ದಾರಿ
ತೋರಿಸುತ್ತದೆ....!



**ಸ್ನೇಹ ಬಿ.ಹೆಚ್.**
**3rd Year B.Com**

## ಒಬ್ಬ ಮನುಷ್ಯ

ಒಬ್ಬ ಮನುಷ್ಯ ಅತಿಯಾದ ವಿನಯದಿಂದ ಇರಬಾರದು
ಪ್ರಾಮಾಣಿಕತೆ ಅತಿಯಾದರೆ ಅಂತಹ ಮನುಷ್ಯನಿಗೆ
ನೋವು, ಕಷ್ಟ, ಹೆಚ್ಚಾಗುತ್ತದೆ.
ನೇರವಾಗಿರುವ ಮರವನ್ನು ಹೇಗೆ
ಮೊದಲು ಕಡಿಯುತ್ತಾರೋ
ಹಾಗೆಯೇ ಪ್ರಾಮಾಣಿಕ ವ್ಯಕ್ತಿಯನ್ನು
ಮೊದಲು ಮಣಿಸುತ್ತಾರೆ.



**ಸ್ನೇಹ**
**1st Year BBA**

# ಯುಗಾದಿಯ ಚಂದ್ರನನ್ನು ಏಕೆ ನೋಡುತ್ತೇವೆ

ದಕ್ಷ ಪ್ರಜಾಪತಿಗೆ 27 ಜನ ಮಕ್ಕಳು ಅವರೇ ಇವತ್ತು ನಾವು ಕರೆಯುವ 27 ನಕ್ಷತ್ರಗಳು ಅವರನ್ನು ಚಂದ್ರನಿಗೆ ಕೊಟ್ಟು ಮದುವೆ ಮಾಡಿದ್ದ ದಕ್ಷನು ಆದರೆ ಚಂದ್ರ ಮಾತ್ರ ಎಲ್ಲಾ ನಕ್ಷತ್ರಗಳಿಗಿಂತಾ ರೋಹಿಣಿ ನಕ್ಷತ್ರವನ್ನು ಮಾತ್ರ ಹೆಚ್ಚು ಪ್ರೀತಿಸುತ್ತಿದ್ದ. ಇದು ಉಳಿದ 26 ಜನರಿಗೆ ಸರಿ ಹೋಗದೆ ತಮ್ಮ ತಂದೆ ದಕ್ಷನ ಬಳಿಗೆ ಹೋಗಿ ದೂರು ಕೊಡುತ್ತಾರೆ. ದಕ್ಷನು ಚಂದ್ರನ ಅಹಂಕಾರವನ್ನು ಕಂಡು ನೀನು ನಿನ್ನ ಹೊಳಪನ್ನು ಕಳೆದುಕೋ ಎಂದು ಶಾಪ ನೀಡುತ್ತಾನೆ...... ಚಂದ್ರನು ಶಾಪ ವಿಮೋಚನೆಗೆ ಬ್ರಹ್ಮನ ಬಳಿ ಹೋದಾಗ ಬ್ರಹ್ಮನು ನೀನು ಶಿವನನ್ನು ಪ್ರಾರ್ಥಿಸು ಎಂದು ಹೇಳುತ್ತಾನೆ. ಆಗ ಚಂದ್ರನು ಶಿವನನ್ನು ಕುರಿತು ಪೂಜಿಸಿ ಶಿವನು ಪ್ರತ್ಯಕ್ಷಗೊಂಡು ಚಂದ್ರನನ್ನು ತನ್ನ ಶಿರದಲ್ಲಿ ಧರಿಸಿ ಅವನ ಶಾಪ ಕಳೆಯುತ್ತಾನೆ. ಆದರೆ ನಿನ್ನ ಹೊಳಪು 15 ದಿನ ಹೆಚ್ಚುತ್ತಾ ಹೋಗುತ್ತೆ ಅವತ್ತು ಅದು ಹುಣ್ಣಿಮೆ ಹಾಗೆ 15 ದಿನ ಕಡಿಮೆಯಾಗುತ್ತೆ ಅದು ಅಮಾವಾಸ್ಯೆ ಎಂದು ಹೇಳಿದಾಗ ಚಂದ್ರನಿಗೂ ತಾನು ಶಿವನ ಜಡೆಯಲ್ಲಿ ಇದ್ದರೆ ಯಾವುದೇ ಶಾಪ ತಟ್ಟಲ್ಲ ಎಂದು ಶಿವನ ನೆತ್ತಿಗೆ ಅಲಂಕರವಾಗುತ್ತಾನೆ.... ಅದೇ ರೀತಿ ಚಂದ್ರ ಪಡೆದುಕೊಂಡ ಶಿವ ಸಾನಿಧ್ಯವನ್ನು ಅವನನ್ನು ಕಂಡು ನಾವು ಪಡೆಯುವ ತತ್ವವೇ ಇದರ ಅರ್ಥ !........



**Akash G**
**2nd Year B.Com**

## ಪರಮಾತ್ಮ

ನನ್ನನ್ನು ಕಾಪಾಡಿರುವೆ ಪರಮಾತ್ಮ
ನಿನಗಾಗಿ ತೆರೆದಿದೆ ನನ್ನ ಹೃದಯಾತ್ಮ
ತಂದೆ ತಾಯಿ ಬಂಧು – ಬಳಗ
ಯಾರಿದ್ದರೇನು?
ಎದೆಯೊಳಗಿನ ನೋವನು
ನಿವಾರಿಸಲು ಸಾಧ್ಯ ನಿನ್ನಿಂದ
ಮನದ ದುಗುಡವನಳಿಸಿ
ನೆಮ್ಮದಿ ನೀಡುವೆ ಬಾಳನುಳಿಸಿ

ನಿನ್ನ ಧ್ಯಾನದಿ ದೊರೆವುದು
ಮನಕೆ ಶಾಂತಿ
ನಿನ್ನ ಸದಾ ಕೋರುವೆ ಬಾಳಿಗೆ ಕಾಂತಿ
ನೀ ಕೊಡು ವರವ, ನೀಗಲು ಭ್ರಾಂತಿ
ಶಿಷ್ಟರನ್ನು ರಕ್ಷಿಸಿ ದುಷ್ಟರನ್ನು ಕ್ಷಮಿಸಿ
ಜಗದೋದ್ಧಾರ ಮಾಡುವೆ ಎಲ್ಲವನು ಕ್ಷಮಿಸಿ



**Keerthana G**
**3rd Year B.Com**

## ಪುಸ್ತಕ

ಒಮ್ಮೆ ಪುಸ್ತಕ ಹೇಳಿತು
ನನಗೆ ನಿನ್ನ ತಲೆ ತಗ್ಗಿಸಿ ಓದು
ತಲೆ ಎತ್ತಿ ನಡೆಯುವಂತೆ ನಾ ಮಾಡುವೆ
ಒಮ್ಮೆ ಪುಸ್ತಕ ಹೇಳಿತು
ನಾ ಕಲಿಸಿದ ವಿದ್ಯೆ ನಿನ್ನ ಕೊನೆವರೆಗೂ
ಕಾಯುವುದು ಎಂದು
ಮತ್ತೊಮ್ಮೆ ಪುಸ್ತಕ ಹೇಳಿತು
ನಿನ್ನ ಅಮೂಲ್ಯ ಸಮಯ ನನಗೂ ಕೊಡುವೆ
ನಾ ನಿನಗೆ ಕೊಡುವೆ
ಪ್ರಪಂಚದ ಜ್ಞಾನ

**Sneha V J**
**Final Year M.Com**

## ನೈತಿಕ ಮೌಲ್ಯದ ರಕ್ಷಣೆಯಿಂದ ಹಾಗೂ ಸಹಬಾಳ್ವೆಯಿಂದ ನಾಡು ಉಳಿದೀತು, ದೇಶ ಬೆಳೆದೀತು !

ಅನೇಕತೆಯಲ್ಲಿ ಏಕತೆಯನ್ನು ಸಾಧಿಸುವುದು ಪ್ರತಿಯೊಂದು ದೇಶದ ಪ್ರತಿಯೊಬ್ಬ ನಾಗರಿಕನಾದಂತಹ ಪ್ರಜೆಯ ಕರ್ತವ್ಯವಾಗಿರಬೇಕು. ಸಹಬಾಳ್ವೆ, ಸಹಾನುಭೂತಿ, ವರಾನುಭೂತಿ, ಸಮಗ್ರತೆ, ಮಾನವೀಯತೆ, ಉದಾರತೆ ದಯೆ, ಕರುಣೆ ಈ ಎಲ್ಲಾ ಅವಶ್ಯಕ ಮಾನವೀಯ ಗುಣಗಳನ್ನು ದೇಶದ ನಾಗರೀಕ ಪ್ರಜೆಗಳು ಹೊಂದಿದ್ದಕೆ ಆ ದೇಶದಲ್ಲಿ ನೆಮ್ಮದಿಯ ನೆಲೆ, ಆರ್ಥಿಕತೆಯಲ್ಲಿ ಸಮೃದ್ಧಿ, ಅಭಿವೃದ್ಧಿಯನ್ನು ಕಾಣಬಹುದು. ಜಗತ್ತಿನ ಪ್ರತಿಯೊಂದು ದೇಶವು ದೇಶದ ಹಿತಾಸಕ್ತಿ, ನೆರೆ ರಾಷ್ಟ್ರಗಳ ಉತ್ತಮ ಭಾಂಧವ್ಯದ ಮನೋಭಾವವಿದ್ದರೆ ರಕ್ಷಣಾಪಡೆಗಳ ಆತೀ ಹೆಚ್ಚು ಅವಶ್ಯಕತೆ ಬರುವ ಸಂದರ್ಭ ಕಡಿಮೆ ಇರುತ್ತದೆ.

ಈ ಹಿಂದಿನ ದಿನದಲ್ಲಿ ಭಾರತ ದೇಶದ ಕಿರೀಟವಾದಂತಹ, ಪ್ರವಾಸಿಗರ ಸ್ವರ್ಗವಾದಂತಹ, ಕಣಿವೆಯಂತಹ ಕಾಶ್ಮೀರದ "ಭಾರತದ ಸ್ವಿಡ್ಜರ್‌ಲ್ಯಾಂಡ್ ಎಂದು ಪ್ರಸಿದ್ಧಿ ಹೊಂದಿರುವ ಪಹಲ್ಗಾಮ್" ನಲ್ಲಿ 28 ಭಾರತೀಯ ಅಮಾಯಕ ಪ್ರವಾಸಿಗರ ಮೇಲೆ ನಡೆದ ಉಗ್ರರ ಭಯೋತ್ಪಾದಕ ದಾಳಿಯು ತುಂಬಾ ಶೋಚನೀಯ ಕೃತ್ಯವಾಗಿದೆ.

ಯಾವ ಕಾರಣಕ್ಕಾಗಿ?

ಇದರಿಂದ ಯಾರಿಗೆ ಪ್ರಯೋಜನ?

ಯಾವುದಕ್ಕಾಗಿ, ಯಾವ ಕಾರಣಕ್ಕಾಗಿ?

ಇದರಿಂದ ಯಾರಿಗೆಲ್ಲಾ ನೆಮ್ಮದಿ, ಖುಷಿ, ಹರ್ಷೋದ್ಗಾರಾ?

ತುಂಬಾ ಪ್ರಶ್ನೆಗಳ ಕೆಲ ಇಂತಹ ಪ್ರಶ್ನೆಗಳು ನಾಗರಿಕ ಪ್ರಜೆಯಲ್ಲಿ ಮೂಡುವುದು ಸಹಜ ಇದಕ್ಕಿಲ್ಲಾ ಉತ್ತರ – ಬೆರಳೆಣಿಕೆಯಷ್ಟು ಭಯೋತ್ಪಾದಕರು ಹಾಗೂ ಆ ಮಂದಿಯನ್ನು ಬೆಳೆಸುತ್ತಿರುವ ಸಂಘಟನೆಗಳೆನ್ನಬಹುದು. ಎಲ್ಲದಕ್ಕೂ ಮಿಗಿಲಾಗಿ ಅವರನ್ನು ರಕ್ಷಿಸುತ್ತಿರುವ ನೆಲೆನೀಡಿರುವ ಹಾಗೂ ಪೋಷಿಸುತ್ತಿರುವ ದೇಶದ ಗಡಿ ಭಾಗದ ಜನರನ್ನು ಅನಾಗರಿಕರೆನ್ನಬಹುದಾಗಿದೆ. ನಾಗರಿಕರ ಮೇಲೆ ಕೋಮು ಮನಸ್ಥಿತಿಯ ದಾಳಿ ಖಂಡನೀಯ. ಇಂತಹ ಘಟನೆಗಳಿಂದ ಯಾವುದೇ ದೇಶದ ಪ್ರಜೆಗಳು ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ.

ನಾನು ಒಬ್ಬ ಭಾರತೀಯನಾಗಿ ಹೇಳುವುದೇನೆಂದರೆ ಈ ನಮ್ಮ ಭಾರತ ದೇಶ ಹಲವು ಧರ್ಮೀಯರಿಗೆ ನೆಲೆ ಇಂತಹ ನಿಷ್ಕಲ್ಮಷ ಭಾರತಾಂಬೆಯನ್ನು ದ್ವೇಷಿಸುವ ಮೃಗೀಯ ಮನುಸ್ಸಾದರೂ ಏಕೆ?

ಈ ನಮ್ಮ ಭಾರತ ದೇಶ ಪ್ರಪಂಚದ ಎಲ್ಲೆಡೆಯಿಂದಲೂ ಜನರು ಜ್ಞಾನ, ಶಾಂತಿ ಮತ್ತು ಆನಂದವನ್ನು ಪಡೆಯಲೆಂದು ಹೋಗುವ ದೇಶಗಳಲ್ಲೊಂದು ನಮ್ಮ ದೇಶ ಎಂದು ಹೆಮ್ಮೆಯಿಂದ ಎದೆಯುಬ್ಬಿಸಿ ಹೇಳುವೆ......

**Proud to be an INDIAN**

Hindu **I** am
Jai **N** ism
Bud **D** hism
Sikh **I** sm
Isl **A** m
Christia **N** ity



Sathish H.G.
Final Year M.Com

# ನೆನಪು

ಶುರುವಾಯ್ತು ಈ ನಮ್ಮಿಬ್ಬರ ಸ್ನೇಹ ತರಗತಿಯಲ್ಲಿ
ಈಗಲೂ ಬಿರುಕು ಬೀಡದೆ ನಡೆಯುತ್ತಿದೆ ಪ್ರಗತಿಯಲ್ಲಿ
ಹದಿಹರೆಯದ ಆ ಹದಿನಾರರ ವಯಸ್ಸು
ನಿನ್ನ ದೇಷಿಸುತಿತ್ತು ಸಣ್ಣದಾಗಿ ಮನಸ್ಸು
ಮತ್ತೆ ಹೇಗೊ ಏನೊ ಒಂದಾದೆವು
ಮನಕ್ಕೆ ಹರಿಯದ ಹಾಗೇ ಬೆರೆಯಿತು...! ಒಲವು
ನೀ ಹೇಳಿಕೊಟ್ಟೆ ನನಗೆ ಹೊಸತನದ ಜೀವನ
ನನ್ನ ಜೀವನಕ್ಕೆ ಅದೇ ಬಾಳ ಪಯಣ
ನಾ ಕುಳಿತಿದ್ದೆ ಹಿಂದೆ ನಿನ್ನದೇ ಗಾಡಿಯಲಿ
ನಮ್ಮಿಬ್ಬರ ಜೀವನ ಸಾಗುತಿತ್ತು ಸಂತೋಷದ ದೋಣಿಯಲಿ
ಹಲವು ಕಡೆಯಿಂದ ಬಂದ ಮಾತು
ನೋಡು ಇವರಿಬ್ಬರೂ ಎಷ್ಟು ಚೆಂದ......
ಆ ಮಾತಿನಿಂದಲೇ ಬಿಗಿಯಾಗಿ ಬೆಳೆಯಿತು ನಮ್ಮಿಬ್ಬರ ಬಂಧ

ನಿನ್ನ ಜೀವನದಲ್ಲಿ ಆದೆ ನಾನೊಂದು ಭಾಗ
ನನಗೆ ಸಿಞಜಿಞುದ್ದೂ ನಿನ್ನ ಕುಟುಂಬದವರ ಮನಸ್ಸಿನಲ್ಲಿ ಜಾಗ
ಯಾರು ಇಲ್ಲವೆಂದು ಕೊರಗುವೇ ಏಕೆ ಓ ಮನವೇ
ನಾ ಯಾವಾಗಲೂ ನಿನ್ನ ಜೊತೆ ಇರುವೆ ಎಂದು ಮಾತು ಕೊಡುವೆ

ಎರಡೂ ವರ್ಷದ ಅವಧಿಯಲ್ಲಿ
ಬೆರೆತೆ ನಾ ನಿನ್ನಲ್ಲಿ
ಕಳೆದ ಆ ಸುಮದುರ ನನಗಿಲ್ಲಿ
ನನ್ನಿಂದ ದೂರ ನಡೆದೇ ಯಾರದೋ ಜೊತೆಯಲ್ಲಿ
ಆದರೂ ನನ್ನ ಮನ ಮಿಡಿಯುವುದು ನಿನ್ನದೇ ಹೆಸರಲಿ
ಹೇಗಾದರೂ ಸರಿ ಇರು ನೀ ನನ್ನ ಒಲವು
ಯಾವಾಗಲೂ ನಿನಗಾಗಿ ಮಿಡಿಯುವುದು ನನ್ನ ಈ ಮನವು
ಆಯಿತು ನಿನಗೆ ಹೊಸದರ ಪರಿಚಯ
ನೀ ಎಂದಿಗೂ ಮರೆಯದಿರು ನನ್ನ ಒಲುಮೆಯ.....

ಕೊನೆಯದಾಗಿ......
ನಾ ಹೇಗೆ ಹೇಳಲಿ ನಿನಗೆ ಧನ್ಯವಾದ
ಯಾವಾಗಲೂ ನೀ ನನ್ನ ಜೊತೆಗಿದ್ದರೆ ಆಗುವುದು
ಆನಂದ ಈ ಹೃದಯಕೆ.....
ನಿನಗಾಗಿ ಮುಡಿಪಾಗಿಡುವೆ ನನ್ನ ಈ ಬದುಕೇ..........

**ಇಂತಿ ನಿನ್ನೊಲುಮೆಯ ಗೆಳತಿ**



**Bhavana D**
**3rd Year B.Com**

## ನೆಚ್ಚಿನ ಗೆಳತಿ

ಅವಳೆಂದರೆ ನೋವಲು ನಗಿಸುವ ದೇವತೆ
ಕಷ್ಟದಲಿ ಜೊತೆ ನಿಲ್ಲುವ ಸ್ನೇಹಿತೆ
ಅವಳ ಮಾತುಗಳೇ ಮುದ ನೀಡುವ ಕವಿತೆ
ಜೊತೆಗಿದ್ದರೆ ಸಾಕವಳು ನನಗಿಲ್ಲ ಯಾವುದೇ ಕೊರತೆ

ಅವಳೆಂದರೆ ಪದಗಳಿಗೆ ನಿಲುಕದ ಸುಂದರ ಕವಿತೆ
ಅವಳೆಲ್ಲೆಡೆ ಹಂಚುವಳು ಒಲವಿನ ಒರತೆ
ನಿಷ್ಕಲ್ಮಶ ಸ್ನೇಹಕೆ ಬೇಕಿರುವುದೊಂದೆ ಸ್ಥಿರತೆ
ಕಾಪಾಡಿಕೊಂಡರಷ್ಟೇ ಸಾಕು ನಮ್ಮ ಸ್ನೇಹಪರತೆ



ಅವಳು ಬಾನಲಿ ಮಿನುಗುವ ತಾರೆಯಂತೆ
ದೂರವಿದ್ದರು ಮನಕೆ ಮುದ ನೀಡುವ ಒಲವಿನ ಕಂತೆ
ಅವಳ ಮಧುರ ಧ್ವನಿಯದು ಜಗವನ ಮರೆಸುವಂತೆ
ಬದುಕ ಕಳೆವಾಸೆ ನಿನ್ನೀ ಸ್ನೇಹದೊಂದಿಗೆ
ತೊರೆದು ಲೋಕದ ಚಿಂತೆ.
ಅವಳೇ ನನ್ನ ನೆಚ್ಚಿನ ಗೆಳತಿ.

**ಯಶಸ್ವಿನಿ ಹೆಚ್. ಎನ್**
**3rd Year B.Com**

## ಹೆಗಲು

ಏನೆಂದು ವರ್ಣಿಸಲಿ ಮುಗಿಯದ ಮಾತುಗಳಲ್ಲಿ
ಅದರೂ ವರ್ಣಿಸಿರುವೆ ನನ್ನದೇ ಶೈಲಿಯಲಿ
ಮೂಟೆ ಹೊತ್ತು ಬಾಗಿದ ಬೆನ್ನಾದೆ
ನಿನ್ನ ಹೆಗಲಲ್ಲಿ ನಾ ರಾಣಿಯಾದೆ
ಭೂಮಿಯ ಸೋಕಿಸಲು ಬಿಡದೆ ನಡೆಸಿದೆ
ನಿನ್ನ ಪಾದುಕೆಗಳ ರಂಧ್ರಗಳ ಅಡಗಿಸಿದೆ
ಮುಳ್ಳಿನ ದಾರಿಯ ದಾಟಿಸಲು ಯತ್ನಿಸಿದೆ
ಸರಿಯಾದ ಮಾರ್ಗ ತಲುಪಿಸಲು ಗದರಿಸಿದೆ
ಸಿಗದಷ್ಟು ಮೇಲೆ ನನ್ನ ಏರಿಸಿದೆ
ನನ್ನ ನೋಡಲು ನೀ ತಲೆ ಎತ್ತಿದೆ
ಕನಸುಗಳ ಸಾಗರ ತುಂಬಾ ಕಟ್ಟಿದೆ
ನನ್ನ ಕನಸುಗಳ ಮುಂದೆ ಅವನ್ನು ಬಂಧಿಸಿದೆ
ನಮಗಾಗಿ ದಿನವೆಣಿಸದೆ ದುಡಿದೆ
ನಿನ್ನ ಆಸೆಗಳ ಪಟ್ಟಿಯನ್ನು ಕಳೆದೆ
ಬಣ್ಣದ ಗಾಳಿಪಟವಾಗಿ ಹಾರಿದೆ
ಸೂತ್ರದ ದಾರವಾಗಿ ಯಾರಿಗೂ ಕಾಣದೆ.



**Pallavi**
1st Year B.Com

## ನೆಚ್ಚಿನ ಗುರುಗಳು

ಎತ್ತಲೋ ಸಾಗುತ್ತಿದ್ದ ಈ ಜೀವನದ ಹಾದಿಯಲಿ
ಸರಿದಾರಿಯ ತೋರಿ ಜ್ಞಾನ ದೀವಿಗೆಯ ಬೆಳಗಿದ ಗುರು ನೀವು
ತಪ್ಪು ಮಾಡಿದಾಗ ಮಾತಲ್ಲಿ ಶಿಕ್ಷಿಸಿ, ಕ್ಷಮಿಸಿ
ತಿದ್ದಿ ನಡೆದಾಗ ಮನದಲ್ಲೇ ಆನಂದಿಸಿದ ಶಿಕ್ಷಕ ನೀವು
ಅಕ್ಕರೆಯಿಂದ ಅಕ್ಷರ ಕಲಿಸಿ ಜಗದ ಶ್ರೇಷ್ಠರ ವಿಚಾರ ತಿಳಿಸಿ
ನಾವು ಅವರಂತಾಗಬೇಕೆಂದು ಪ್ರೇರೇಪಿಸಿದವರು ನೀವು
ನುಡಿಯೊಂದಿಗೆ ಉತ್ತಮ ಮೌಲ್ಯಗಳನ್ನು ಪರಿಚಯಿಸಿ
ಬೋಧನೆಯ ಮೂಲಕ ಸಾಧನೆಯ ದಾರಿ ತೋರಿದವರು ನೀವು
ಪೋಷಕರಂತೆ ಪ್ರೀತಿ ತೋರಿ ಸ್ನೇಹಿತರಂತೆ ಜೊತೆಗೂಡಿ
ಪ್ರತಿ ಸೋಲು ಗೆಲುವಿನಲಿ ಧೈರ್ಯ ತುಂಬಿದವರು ನೀವು
ನಿಮಗುಂಟು ಎಣಿಕೆಗೆ ಸಿಗದ ಶಿಷ್ಯವೃಂದ ಅದರಲ್ಲಿ
ನಾನೊಂದು ಚುಕ್ಕಿ ಎಂಬುದು ನನಗೆ ಪರಮಾನಂದ
ಮನವೆಂಬ ಗುಡಿಯೊಳಗೆ ಗುರುವೆಂಬ ದೈವವು ನೀವು
ಕೆಲವೊಮ್ಮೆ ಕೋಪವ ತೋರಿ ನಿಷ್ಕಲ್ಮಶ ಪ್ರೀತಿಯ ನೀಡುವ ಪರಿಪಾಲಕ ನೀವು
ಮರೆಯಲಾಗದ ವ್ಯಕ್ತಿ ನೀವು, ಬಾಳ ಸುಧೆಗೆ ನೆನೆಪು ನೀವು
ನನ್ನ ಪ್ರತಿ ಹೆಜ್ಜೆಗೂ ಸ್ಫೂರ್ತಿ ನೀವು ನನ್ನ ನೆಚ್ಚಿನ ಗುರುವು ನೀವೂ.......



**ರಮ್ಯ ಕೆ.ಸಿ.**
1st Year B.A.

# ಸಜ್ಜನರ ಸದ್ಗುಣ

ಒಂದು ಊರಿನಲ್ಲಿ ಒಬ್ಬ ವಿದ್ವಾಂಸನಿದ್ದನು. ಆತ ಸಾಕಷ್ಟು ಓದಿಕೊಂಡಿದ್ದ, ಓದಿಕೊಂಡು ಕಂಡ ಕಂಡವರನ್ನು ಕೆಣಕುತ್ತಿದ್ದನು, ಅವರನ್ನು ತನ್ನ ತರ್ಕದ ಜಾಲದಲ್ಲಿ ಸಿಲುಕಿಸುತ್ತಿದ್ದನು, ಅವರ ಮಾತುಗಳಲ್ಲಿನ ತಪ್ಪುಗಳನ್ನು ಎತ್ತಿ ಹೇಳಿ ಅವಮಾನಗೊಳಿಸುತ್ತಿದ್ದನು, ಸಣ್ಣ ಪುಟ್ಟ ವಿಷಯಕ್ಕೂ ಜಗಳ ಕಾಯುತ್ತಿದ್ದನು. ವಾದಮಾಡಿ ಅವರನೆಲ್ಲ ಸೋಲಿಸುತ್ತಿದ್ದನ್ನು ಮತ್ತು ತಾನೊಬ್ಬ ಮಹಾ ಪಂಡಿತನೆಂಬ ಗತ್ತಿನಲ್ಲಿ ಮೆರೆಯುತ್ತಿದ್ದನು,

ಒಮ್ಮೆ ಅವನು ರಸ್ತೆಯಲ್ಲಿ ಹೋಗುತ್ತಿದ್ದಾಗ ರೈತನೊಬ್ಬನ್ನು ಕರೆದನು. ಅವನು ಹತ್ತಿರ ಬರುತ್ತಲೇ ಅವನ ಬಳಿ ಕೇಳಿದನು "ನೀನು ವೇದವನ್ನು ಓದಿದ್ದಿಯಾ? 'ಇಲ್ಲ ಸ್ವಾಮಿ ನಾನು ಓದಿಲ್ಲ', ರೈತನು ಉತ್ತರಕೊಡುತ್ತಾನೆ 'ಪುರಾಣ ಶಾಸ್ತ್ರವನ್ನು ಓದಿದ್ದೀಯಾ?' ಇಲ್ಲ ಸ್ವಾಮಿ ನಾನು ಓದಿಲ್ಲ...... ಮಹಾಕಾವ್ಯ, ತರ್ಕ, ವ್ಯಾಕರಣ ಮುಂತಾದವುಗಳನ್ನಾದರೂ ಓದಿದ್ದೀಯಾ? ಪಂಡಿತ ಆಹಂಕಾರದಿಂದ ಕೇಳುತ್ತಾನೆ, ಇಲ್ಲ ಸ್ವಾಮಿ ನನಗೆ ಅವುಗಳನ್ನು ಓದಲು ಅವಕಾಶವೇ ಆಗಿಲ್ಲ ಎಂದು ರೈತ ಕುಗ್ಗಿಹೋಗುತ್ತಾನೆ.

ನಿನ್ನ ಇಡೀ ಜೀವನ ಬರಿ ಹೊಲ ಉಳುವುದರಲ್ಲಿಯೆ ಹೋಯಿತು. ಅದರಿಂದ ವ್ಯಕ್ತಿಗೆ ಏನು ತಿಳುವಳಿಕೆ ಬರುತ್ತದೆ? ನಿನ್ನ ಜೀವನ ವ್ಯರ್ಥವಾಗಿ ಹೋಯಿತು, ನನ್ನನ್ನು ನೋಡು ಜನರು ಎಷ್ಟೊಂದು ಗೌರವ ಕೊಡುತ್ತಾರೆ ಎಂದು ರೈತನನ್ನು ತುಚ್ಚವಾಗಿ ನಿಂದಿಸುತ್ತಾನೆ. ಆಗ ರೈತ ಹೇಳುತ್ತಾನೆ ನಿಜ ಸ್ವಾಮಿ ನಿಮ್ಮಿಂದ ಜನ ತಿಳುವಳಿಕೆಯನ್ನು ಪಡೆಯುತ್ತಾರೆ, ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾರೆ. ಆದರೆ ನೀವು ಕೂಡಾ ಹಸಿವೆಯಾದಾಗ ಉಣ್ಣಬೇಕು. ಉಣ್ಣುವುದರ ಮೂಲಕ ಮೈಯಲ್ಲಿ ಶಕ್ತಿ ಬರುತ್ತಾದೆ. ಅಧಿಕಾರಿಯಿರಲಿ, ವ್ಯಾಪಾರಿಯಿರಲಿ, ವೈದ್ಯರಿರಲಿ, ಯಾರೇ ಇದ್ದರೂ ರೈತ ಬೆಳೆದ ಆಹಾರವನ್ನೆ ತಿನ್ನಬೇಕು, ರೈತನಿಲ್ಲದೆ ಈ ಜಗತ್ತು ನಡೆಯಲಾರದು, ಎಂದು ಹೆಮ್ಮೆಯಿಂದ ಹೇಳಿದ. ವಿದ್ಯೆಯಿಂದ ಆಹಂಕಾರ ಬಂದರೆ ಅದು ವಿಷಕ್ಕೆ ಸಮ, ವಿದ್ಯೆಯಿಂದ ವಿನಯ ಬಂದರೆ ಅದು ಅಮೃತಕ್ಕೆ ಸಮ.



**ಮೊಹಮ್ಮದ್ ಅಲಿ**
**1st Year B.Com.**

**● ಚಿರತೆಗಿಂತ ವೇಗವಾಗಿ ಓಡದಿದ್ರೆ ಜಿಂಕೆ ಬದುಕಲ್ಲ**
**ಜಿಂಕೆಗಿಂತ ವೇಗವಾಗಿ ಓಡದಿದ್ರೆ ಚಿರತೆಯೂ ಬದುಕಲ್ಲ.**
**ಬದುಕಬೇಕು ಅಂದ್ರೆ ಓಡಲೇಬೇಕು ಅದು ಜಿಂಕೆಯಾದ್ರು ಆಷ್ಟೇ ಚಿರತೆಯಾದ್ರು ಅಷ್ಟೆ.**

---

**● ಸೋಲು ಮತ್ತು ಒಂಟಿತನ ನಮ್ಮ ಜೀವನದಲ್ಲಿ ಬಹಳ ಪಾಠವನ್ನು ಕಲಿಸುತ್ತದೆ.**
**ಸೋಲು ಯಾವ ತರಹ ಗೆಲ್ಲಬೇಕು ಎಂದು ಕಲಿಸಿದರೆ**
**ಒಂಟಿತನ ಜೀವನದಲ್ಲಿ ಯಾರನ್ನು ನಂಬಬೇಕು ಯಾರು ನಮ್ಮವರು ಎಂದು ತಿಳಿಸುತ್ತದೆ.**

# ಯುಪಿಎಸ್‌ಇ ಪರೀಕ್ಷೆಯಲ್ಲಿ ಯುವಕರ ಪಾತ್ರ

**ಪೀಠಿಕೆ:** ಓಂ ಶ್ರೀ ಗಣಪತಿ ನಮಃ. ಇಲ್ಲಿ ನಾನು ಮುಖ್ಯವಾಗಿ ಒಂದು ವಿಷಯವನ್ನು ನಿಮ್ಮ ಮುಂದೆ ವ್ಯಕ್ತಪಡಿಸಲು ಬಯಸುತ್ತೇನೆ. ನನ್ನ ಆತ್ಮೀಯ ಸ್ನೇಹಿತರೇ, ಜೀವನ ಎಂಬುದು ಒಂದು ರೀತಿಯಲ್ಲಿ ರೈಲಿನ ಬಂಡಿಯಂತೆ. ರೈಲು ಓಡಿದಾಗ ಮಾತ್ರ ಮುಂದಕ್ಕೆ ಹೋಗುತ್ತದೆ. ಹಾಗೆಯೇ ಮಾನವನ ಜೀವನವು ಕೂಡ. ಕಷ್ಟಸುಖವನ್ನು ಮೆಟ್ಟಿ ನಿಂತಾಗ ಮಾತ್ರ ಅದು ಜೀವನ. ಈ ವಾಕ್ಯವನ್ನು ನಾನು ಯಾಕೆ ವ್ಯಕ್ತಪಡಿಸಿದೆ ಎಂದರೆ, ಈಗಿನ ಯುವಕರು ಎಚ್ಚರಗೊಂಡು ನಮ್ಮ ದೇಶದ ಸಮಗ್ರ ಅಭಿವೃದ್ಧಿಗೆ ಪಾತ್ರರಾಗಿ ಸಾರ್ವಜನಿಕರ ಆಸ್ತಿಯನ್ನು ರಕ್ಷಿಸುವುದು ನಾಗರಿಕ ಸೇವೆಯ ಪ್ರಮುಖ ಉದ್ದೇಶ. ನಾನು ಹೇಳುತ್ತಿರುವುದು ನಿಮಗೆ ಈಗಾಗಲೇ ಗೊತ್ತಾಗಿದೆ ಎಂದು ಭಾವಿಸುತ್ತೇನೆ.

ಒಳ್ಳೆಯ ಹುದ್ದೆ ಪಡೆದು ಸಮಾಜದಲ್ಲಿ ಒಳ್ಳೆಯ ಕೆಲಸಮಾಡಿ ಗುರ್ತಿಸಿಕೊಳ್ಳುವುದನ್ನು ಬಿಟ್ಟು ಮೊಬೈಲ್ ಎಂಬ ಕೆಟ್ಟ ಹುಳುವಿನ ಜೊತೆಗೆ ಮಾರುಹೋಗಿ ಜೀವನವನೇ ಹಾಳು ಮಾಡಿಕೊಳ್ಳುವ ಪ್ರಸಂಗ ಪ್ರಸ್ತುತ ಜಾರಿಯಲ್ಲಿದೆ. ಇದಕ್ಕೆ ತಕ್ಕ ಉತ್ತರ, ಪುಸ್ತಕ ಮತ್ತು ಒಂದು ಪೆನ್ನು ಇದ್ದರೆ ಜಗತ್ತನ್ನೇ ಗೆಲ್ಲಬಹುದು ಎಂಬುದು ನನ್ನ ನಂಬಿಕೆ. ಯುಪಿಎಸ್‌ಸಿ ಎಂಬುದು ಭಾರತದ ಒಂದು ಕಠಿಣವಾದ ಪರೀಕ್ಷೆ ಇದನ್ನು ಗೆಲ್ಲುವುದು ಅಷ್ಟು ಸುಲಭವಲ್ಲ. ಹಾಗೆ ಗೆದ್ದು ತೋರಿಸುವುದು ನಮ್ಮ ಇಚ್ಛಾಶಕ್ತಿ. ನಮ್ಮ ಯುವಕರು ಅದರಲ್ಲೂ ಬಿ.ಎ ಓದುತ್ತಿರುವ ವಿದ್ಯಾರ್ಥಿಗಳು ಇದರಲ್ಲಿ ತೇರ್ಗಡೆಯಾಗುವುದು ಕಡಿಮೆಯಾಗಿರುವುದು ನನಗೆ ಬೇಸರವಾದ ಸಂಗತಿ. ಇದಕ್ಕೆ ಕಾರಣ ಅವರು ಸೋಂಬೇರಿಯಾಗಿ ಇರುವುದು. ಕಾರಣ ಅದರಿಂದ ಹೊರಬನ್ನಿ ಸ್ನೇಹಿತರೆ. ಮುಂದೆ ನಿಮ್ಮ ಬದುಕು ಪ್ರಜ್ವಲಿಸುತ್ತದೆ. ನೀವು ಒಂದು ಬಾರಿ ಮನಸು ಮಾಡಿ ಇಡೀ ಜಗತ್ತನ್ನೇ ಗೆಲ್ಲಬಹುದು. ಐಎಎಸ್ ಯಾವ ಲೆಕ್ಕ. ಮನುಷ್ಯ ಮನಸ್ಸು ಮಾಡಿದರೆ 10 ಐಎಎಸ್ ಮಾಡಬಹುದು. ಆದರೆ ನೀವು ಕುಗ್ಗಬಾರದು. ಮೊದಲು ಪ್ರಯತ್ನ ಮಾಡಿ, ಪ್ರತಿಫಲ ದೇವರಿಗೆ ಬಿಡಿ. ಇದನ್ನು ಮಾಡಲು ಬಡತನ ಮತ್ತು ದಡ್ಡತನ ಅಡ್ಡಿಯಾಗುವುದಿಲ್ಲ. ಮಾಡಲು ಮನಸ್ಸು ಬೇಕು. ನಾನು ನಿಮಗೆ ಈ ವಿಷಯವನ್ನೇ ಯಾಕೆ ಹೇಳಲು ಬಯಸಿದೆ ಎಂದರೆ ನಾನು ಒಬ್ಬ ಯುಪಿಎಸ್‌ಸಿ ಅಭ್ಯರ್ಥಿ ನನ್ನ ತರ ನೀವು ಬರಬೇಕು ಎಂಬುದು ನನ್ನ ಆಶಯ. ಧನ್ಯವಾದಗಳು.



**Pruthvi B.H.**
2nd Year B.A.

**'ಅಮ್ಮ'**

**'ಅಮ್ಮ' ಎಂದರೆ ಬರಿ ಪದವಲ್ಲ**
**ಪದೇ ಪದೇ ಸಿಗುವ ವಸ್ತುವಲ್ಲ**
**ದೇವರಿಗಿಂತ ಕಡಿಮೆ ಇಲ್ಲ**
**ಹುಡುಕಿದರು ಸಿಗುವುದಿಲ್ಲ**
**ಬಯಸಿದರು ಬರುವುದಿಲ್ಲ**
**ಇವಳನ್ನು ಕಳೆದುಕೊಂಡರೆ**
**ಜೀವನದಲ್ಲಿ ನೆಮ್ಮದಿ ಇಲ್ಲ**

**ಗೆದ್ದವರಿಗಿಂತ ಸೋತು ಗೆದ್ದವರ ಕಥೆಗಳನ್ನು ಹೆಚ್ಚು ಓದಿ, ಯಾಕೆಂದರೆ ಅವರು ಯಾವ ತಪ್ಪು ಮಾಡಿ ಸೋತರು ಅಂತ ತಿಳಿದರೆ ಮುಂದೆ ನಾವು ಆ ತಪ್ಪುಗಳನ್ನು ಮಾಡದೇ ಗೆಲುವಿನ ಕಡೆ ಸಾಗಬಹುದು.**

# ಕಡಲ ಕನಸು

ನಾನು ರಜೆಗೆಂದು ಮಂಗಳೂರಿಗೆ ಹೋದಾಗ ಅಲ್ಲಿಯ ವಾತಾವರಣ ಪ್ರಕೃತಿ ಸೌಂದರ್ಯ ಸವಿಯಲು ಮನೆಯಿಂದ ಸ್ವಲ್ಪ ದೂರದಲ್ಲಿರುವ ಕಡಲ ಬಳಿಗೆ ಹೋದೆ. ಸಮಯ ಸರಿಯಾಗಿ ಮಧ್ಯಾಹ್ನ 3 ಗಂಟೆಯಾಗಿತ್ತು. ಸುಡುವ ಬಿಸಿನಲ್ಲಿ ಸಮುದ್ರದ ದಂಡೆಯಲ್ಲಿ ತಂಪಾದ ಗಾಳಿ ಬೀಸುತಿತ್ತು ಅಲ್ಲಿಯೇ ಪಕ್ಕದಲ್ಲಿದ ಮರದ ಕೆಳಗೆ ಒಂದಷ್ಟು ಬೆಂಚುಗಳು ಸಹ ಇದ್ದವು ಜೊತೆಗೆ ಸ್ಥಳೀಯ ಮೀನುಗಾರರ ದೋಣಿಗಳು ಸಹ ದಡದಲ್ಲಿದ್ದವು. ನಡೆದು ಬಂದು ಆಯಾಸವಾದ ಕಾರಣ ಅಲ್ಲಿಯೇ ನಾನು ಕುಳಿತೆ ಅಲೆಗಳ ಸದ್ದಿಗೆ ಬೀಸುವ ತಂಗಾಳಿಗೆ ನಾನು ನಿದ್ರೆಗೆ ಜಾರಿದೆ. .
ಒಂದು ಪುಟ್ಟ ಕುಟುಂಬ ಕುಟುಂಬದಲ್ಲಿ 5ಜನ ಸದಸ್ಯರು ತಂದೆ–ತಾಯಿ, ಅಕ್ಕ, ತಮ್ಮ, ಅಜ್ಜಿ ಬಡಕುಟುಂಬವಾದರಿಂದ ತಂದೆ ಸಮುದ್ರದಲ್ಲಿ ಮೀನು ಹಿಡಿದು ಜೀವನ ನಡೆಸುತ್ತಿದ್ದರೆ ಅಜ್ಜಿಯು, ಸಮುದ್ರದ ಮನೆಯ ಅಲಂಕಾರಿಕ ವಸ್ತುಗಳ ತಯಾರಿಸಿ ಪ್ರವಾಸಿಗರಿಗೆ ಮಾರಾಟ ಮಾಡುತ್ತಿದ್ದರು. ಈ ಕೆಲಸ ಕೇಳಲು ಸುಲಭ ಎನಿಸಿದರು ಮಾಡುವುದು ಕಠಿಣವಾಗಿತ್ತು.

ಒಂದೇ ಗಾತ್ರದ ಚಿಪ್ಪು ಹಾಗೂ ಒಂದೇ ಬಣ್ಣದ ಚಿಪ್ಪು ಅದರದ್ದು. ಅವುಗಳನ್ನು ಕೊರೆದು ಮನೆಯಲ್ಲೆ ಇರುತ್ತಿದ್ದರು. ತಂದೆ ಹಾಗೂ ಚಿಕ್ಕಪ್ಪ ಒಟ್ಟಾಗಿ ಮೀನು ಹಿಡಿದು ಜೀವನ ನಡೆಸುತಿದ್ದರು. ಅಕ್ಕ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದರೆ "ತಮ್ಮ 10ನೇ ತರಗತಿ ಹೋದುತ್ತಿದ್ದ ಅವನ ಹೆಸರು "ಗಿರಿ." ಗಿರಿಗೆ ತಮ್ಮ ತಂದೆಯೊಂದಿಗೆ ಮೀನು ಹಿಡಿಯಲು ಹೋಗುವುದು ಎಂದರೆ ತುಂಬಾ ಇಷ್ಟವಾಗುತಿತ್ತು ಅದರೂ ತಂದೆ ಯಾವಾಗಲೂ ಬಿಟ್ಟು ಹೋಗುತ್ತಿದ್ದರು. 7 ದಿನ 15ದಿನ 20ದಿನದ ನಂತರ ಹಿಂತಿರುಗುತ್ತಿದ್ದರು. ಗಿರಿ ಅವರ ಅಜ್ಜಿ ಯಾವಾಗಲು ಎಲ್ಲವನ್ನು ದಡಕ್ಕೆ ಹಾಕುತ್ತದೆ ಎಂದು ಹೇಳುತ್ತಿದ್ದರು. ಗಿರಿ ಅಜ್ಜಿಯ ಮಾತನ್ನು ಹಿಡಿಯಷ್ಟು ಕೇಳುತ್ತಿರಲಿಲ್ಲ. ಗಿರಿಯ ತಂದೆಯ ಆಸೆ ಎಂದರೆ ಗಿರಿಯನ್ನು ಡಾಕ್ಟರ್ ಓದಿಸುವುದು ಅವರ ಆಸೆಯಾಗಿತ್ತು. ಕಾರಣ "ಗಿರಿಯ ತಾತ ಆಯುರ್ವೇದ ತಜ್ಞರಾಗಿದ್ದರು. ಗಿರಿಯೂ ಬುದ್ಧಿವಂತನಾಗಿದ್ದು, ಉತ್ತಮ ಪುಟ್‌ಬಾಲ್ ಕ್ರೀಡಾಪಟುವಾಗಿದ್ದನು. ಪ್ರತಿ ಬಾರಿಯಂತೆ ಗಿರಿಯ ತಂದೆ ಹಾಗೂ ಅವರ ಗೆಳೆಯರು ಮೀನು ಹಿಡಿಯಲು ಕಡಲಿಗೆ ನಮಸ್ಕರಿಸಿ ಹೊರಟರು. ಆದರೆ ವಾರ ಕಳೆಯಿತ್ತು 15 ದಿನ ಕಳೆಯಿತು, 30 ದಿನ ಕಳೆಯಿತು. ಗಿರಿಯ ತಾಯಿಯ ಮನದಲ್ಲಿ ಅತಂಕವಾದರೆ ಅಜ್ಜಿಯು ಎಲ್ಲಾ ದೇವರಿಗೆ ಹರಕೆ ಕಟ್ಟುತ್ತಿದ್ದರು "ಗಿರಿಯು ತಂದೆಯ ಆಗಮನ ಕಾಯುತಿದ್ದ. ಆದರೆ ತಂದೆಯಾಗಲಿ, ಚಿಕ್ಕಪ್ಪ ಯಾರು ಹಿಂದಿರುಗಲಿಲ್ಲ. ಗಿರಿಗೆ ತನ್ನ ತಂದೆ ಹೇಳಿದ ಮಾತುಗಳು ಅತಿಯಾಗಿ ನೆನಪಾಗುತ್ತಿದ್ದವು. ಹಾಗೂ ಗಿರಿಯು ಎಸ್‌ಎಸ್‌ಎಲ್‌ಸಿಯಲ್ಲಿ 90% ಅಂಕ ಪಡೆದಿದ್ದನು. ಈ ವಿಷಯ ಹೇಳಲು ತಂದೆಯೇ ಬರಲಿಲ್ಲ. ಮರುದಿನ ಗಿರಿಯು ಕಡಲ ಬಳಿ ಬಂದಾಗ ಒಂದು ರೀತಿಯಾಗಿ ಕಡಲ ಮೇಲೆ ದ್ವೇಷ ಉಂಟಾಗುತ್ತದೆ. ಎಲ್ಲಿರುವರು ನನ್ನ ತಂದೆ, ಹೇಗಿರುವರೊ, ಊಟ ಮಾಡಿರುವರೊ ಇಲ್ಲವೋ ಮುಂದಿನಬಾರಿ ನನ್ನನ್ನು ಮೀನು ಹಿಡಿಯಲು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದರು ಎಂದು ಮೌನಿಯಾಗಿ ಗಿರಿ ಮನೆಗೆ ಹೊರಟನು. "ಅಜ್ಜಿಯು ಯಾವಾಗಲೂ ಹೇಳುವಂತೆ ಕಡಲು ಯಾವುದನ್ನು ತಮ್ಮೊಳಗೆ ಇಡುವುದಿಲ್ಲ ಎಲ್ಲವನ್ನೂ ದಡಕ್ಕೆ ಹಾಕುವುದೆಂದು ಹೇಳಿ ಸಮಾಧಾನ ಮಾಡಿದರು ನಂತರದ ಕೆಲವು ದಿನಗಳು ತಂದೆ– ಚಿಕ್ಕಪ್ಪ ಹಾಗೂ ಗೆಳೆಯರು ಹಿಂತಿರುಗಿದರು. ಅವರು ಮೀನು ಹಿಡಿದು ಹಿಂದಿರುಗುವಾಗ, ಮಾರ್ಗ ಮಧ್ಯ ಹಡಗು ಕೆಟ್ಟ ಕಾರಣ ತಡವಾಗಿ ಬಂದೆವು ಎಂದು ಗಿರಿಗೆ ತನ್ನ ತಂದೆ ಹೇಳುವಷ್ಟರಲ್ಲಿ ತಂದೆಯನ್ನು ತಬ್ಬಿ ಹಿಡಿದು ಇಷ್ಟು ದಿನ ನಮ್ಮನ್ನು ಬಿಟ್ಟು ಎಲ್ಲಿ ಹೋಗಿದ್ದಿರಿ ಇನ್ನೆಂದಿಗೂ ಮತ್ತೆ ಮೀನು ಹಿಡಿಯಲು ಹೋಗಬೇಡಿ ಎಂದನು. ಅದಕ್ಕೆ ತಂದೆಯು ಪ್ರತಿಯಾಗಿ ನೋಡು ಮಗ ನಮ್ಮನ್ನು ಹುಟ್ಟಿನಿಂದ ಇಲ್ಲಿಯವರೆಗೆ ಸಲಹಿರುವುದು ಈ ಕಡಲು, ನಮ್ಮನ್ನು ಸಲಹುವುದಿಲ್ಲವಾ ಎಂದು ಗಿರಿಗೆ ಹೇಳಿದರು. ದಡದಿಂದ ಇಬ್ಬರೂ ಮನೆಗೆ ಹೊರಟರು. ಇಷ್ಟೆಲ್ಲಾ ವಿಷಯ ನಡೆಯಿತು. ಸಮುದ್ರ ಕಾಯುವ ಗಾರ್ಡೊಬ್ಬರು ಹೇಳಿ ಮೇಲೇಳಿ, ಸಮುದ್ರದ ನೀರು ಹೆಚ್ಚಾಗುತ್ತಿದೆ, ಅಲೆಯಬ್ಬರ ಜೊರಾಗುತ್ತಿದೆ ಎಂದು ಎದ್ದೇಳುತ್ತಿದ್ದರು. ಆಗ ನನಗೆ ಅರಿವಾಯಿತು ಇಲ್ಲಿಯವರೆಗೆ ನಾನು ಕಂಡದ್ದು ಕಡಲ ಕನಸು ಎಂದು ತಿಳಿಯಿತು. ಸಮಯ 4:30 ಆಗಿತ್ತು ಅಲ್ಲಿಂದ ಮನೆಗೆ ಹೊರಟೆ.

**Anil K.N.**
1st Year B.A.

# ಜನಪದ ಸಂಸ್ಕೃತಿಯ ಜಾಡು

ಜನಪದ ಎಂಬುದು ಕೇವಲ ನಾಲ್ಕು ಅಕ್ಷರದ ಪದವಲ್ಲ ಅಥವಾ ಒಂದು ಪುಸ್ತಕಕ್ಕೆ ಸೀಮಿತವಾದದ್ದು ಅಲ್ಲ. ಜನಪದದ ಆಳ ಅಗಲ ತಿಳಿಯುವುದು ಅಷ್ಟು ಸುಲಭವೂ ಇಲ್ಲ.

ಜನಪದವನ್ನು ಕೇವಲ ಹಾಡು, ನೃತ್ಯ ಅಥವಾ ಉಡುಗೆ ತೊಡುಗೆಗಳಿಗೆ ಸೀಮಿತ ಮಾಡಿಬಿಡುತ್ತೇವೆ. ಆದರೆ ಜನಪದ ಮನುಷ್ಯನ ರಕ್ತದ ಕಣಕಣಗಳಲ್ಲಿ ಬೆರೆತು ಹೋಗಿದೆ. ನಾವು ಸಾಮಾನ್ಯವಾಗಿ ಈ ಆಧುನಿಕ ಯುಗದಲ್ಲಿ ನಮ್ಮ ಸಮಾಜವನ್ನು ಧಾರ್ಮಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ ಹೀಗೆ ಅನೇಕ ವಿಭಾಗಗಳನ್ನಾಗಿ ವಿಂಗಡಿಸಿ ನೋಡುತ್ತೇವೆ. ಆದರೆ ನಮ್ಮ ಜನಪದ ಈ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡು ಅವುಗಳನ್ನು ಮೀರಿ ಬೆಳೆದು ನಿಂತಿರುವ ಹೆಮ್ಮರ. ಅದು ಹೇಗೆ? ಎಂಬುದನ್ನು ತಿಳಿಯಲು ಸೂಕ್ಷ್ಮ ಸಂವೇದನೆಯಿಂದ ನೋಡಬೇಕಾಗುತ್ತದೆ.

ಜನಪದ ಸಂಸ್ಕೃತಿ ಎಲ್ಲಾ ಪ್ರಾಂತ್ಯಕ್ಕೂ, ಎಲ್ಲಾ ಜನಾಂಗಕ್ಕೂ ಮತ್ತು ಎಲ್ಲಾ ಸಮುದಾಯಕ್ಕೂ ವಿಸ್ತರಿಸಿಕೊಂಡಿದೆ. ಹೇಗೆ? ಎಂಬುದನ್ನು ಸ್ವಲ್ಪ ನೋಡೋಣ. ಮೊದಲಿಗೆ ಜನಪದ ಹಾಡು, ಕುಣಿತ, ಆಟಗಳು, ಆಚಾರ, ವಿಚಾರಗಳು ಮತ್ತು ಹಬ್ಬ ಹರಿದಿನಗಳು ವಿವಿದ ಅಡುಗೆಗಳು ತಿನ್ನುವ ವಿಧಾನಗಳು ಇವು ನಮ್ಮ ಪ್ರತಿದಿನದ ದಿನಚರಿಗಳಲ್ಲಿ ಹಾಸುಹೊಕ್ಕಾಗಿವೆ. ಇದೆಲ್ಲಾ ನಮ್ಮ ಜನಪದ ಮೂಲವಾಗಿದ್ದು ಪ್ರತಿಯೊಬ್ಬರಲ್ಲೂ ಆಳವಾಗಿ ಬೇರೂರಿದೆ. ಅಷ್ಟೆ ಅಲ್ಲದೆ ಎಷ್ಟೊ ವಿಷಯಗಳಲ್ಲಿ ತಮ್ಮ ಕರ್ತವ್ಯದ ರೂಪದಲ್ಲಿ, ಆಟದ ರೂಪದಲ್ಲಿ, ಊಟ ಉಪಚಾರಗಳಲ್ಲಿ ಅಥವಾ ಭಕ್ತಿಗಳಲ್ಲಿ, ಸಾಂಪ್ರದಾಯಕ ರೂಪದಲ್ಲಿ, ಅನೇಕ ರೂಪದಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಒಂದಲ್ಲ ಒಂದೂ ರೂಪದಲ್ಲಿ ರೂಢಿಗತವಾಗಿ ಬೆಳೆದು ನಿಂತಿದೆ. ಇನ್ನೂ ಆಳವಾಗಿ ಯೋಚಿಸುತ್ತಾ ಹೋದರೆ ಬಗೆದಷ್ಟು ಆಳ – ತೆಗೆದಷ್ಟು ಆಳ ತೆರೆದುಕೊಳ್ಳುತ್ತಲೇ ಹೋಗುತ್ತದೆ ನಮ್ಮ ಜನಪದದ ವಿಶಾಲ ರೂಪ. ಎಷ್ಟೋ ವಿಷಯಗಳು ನಮ್ಮ ಅರಿವಿಗೂ  ಬಾರದೆ, ನಮ್ಮ ಯೋಚನಾ ಶಕ್ತಿಗೂ ನಿಲುಕದೆ, ನಮ್ಮ ದಿನಚರಿಗಳಲ್ಲಿ ನಡೆದೇಹೋಗುತ್ತದೆ. ಇದಕ್ಕೆಲ್ಲ ಕಾರಣ ನಮ್ಮ ಬದುಕಿನ ಮೂಲ"ತಾಯಿ ಬೇರೇ ಜನಪದ ಸಂಸ್ಕೃತಿ.

ಮತ್ತೊಂದು ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಜನಪದ ಸಂಸ್ಕೃತಿ ತನ್ನ ರೂಪವನ್ನು ಒಂದು ಪ್ರಾಂತ್ಯದಿಂದ ಮತ್ತೊಂದು ಸಮುದಾಯಕ್ಕೆ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಕ್ಷೇತ್ರಕ್ಕೆ ಅನುಗುಣವಾಗಿ ಎಲ್ಲಾ ಇರಬಹುದು ಅಥವಾ ನಮ್ಮ ಊಟೋಪಚಾರ ಪದ್ಧತಿಗಳಲ್ಲಿ ಬಹಳಷ್ಟು ವಿಭಿನ್ನತೆ ವಿಶೇಷತೆ ಕಾಣುತ್ತೇವೆ. ಒಂದು ಉದಾಹರಣೆ ಹೇಳುವುದಾದರೆ ನಮ್ಮ ಕರ್ನಾಟಕದ ಬಯಲು ಸೀಮೆ ಹೆಂಗಸರು ಸೀರೆ ಸೆರಗನ್ನು ಹಿಂದೆ ಹಾಕುತ್ತಾರೆ. ನಮ್ಮ ಕೊಡಗಿನಲ್ಲಿ ಸೀರೆಯ ಸೆರಗನ್ನು ಮುಂದೆ ಹಾಕುತ್ತಾರೆ. ಇನ್ನು ನಮ್ಮ ಉತ್ತರ ಕರ್ನಾಟಕದ ಮಹಿಳೆಯರು ಕಚ್ಚೆ ಸೀರೆ ಅಥವಾ ತಲೆಯ ಮೇಲೆ ಸೆರಗು ಹಾಕುತ್ತಾರೆ. ಅದೇ ರೀತಿ ಹಾಡು, ಕುಣಿತಕ್ಕೆ ರಂಗ ಪರಿಕರಗಳು ಚರ್ಮ ವಾದ್ಯಗಳು ಬಳಸುವ ವಿಧಾನಗಳು ಎಲ್ಲವೂಗಳ ವಿಭಿನ್ನತೆಯಲ್ಲಿ ವಿಶೇಷತೆ ಕಾಣುತ್ತೇವೆ. ಅದಕ್ಕೆ ನಮ್ಮ ಜನಪದ ಸಂಸ್ಕೃತಿಯ ಆಳ ಅಳೆಯಲು ದೃಷ್ಟಿಕೋನ ಬೇಕೆ ಬೇಕು. ಈ ರೀತಿಯ ವಿಭಿನ್ನತೆ ಕೇವಲ ನಮ್ಮ ರಾಜ್ಯಕ್ಕೆ ಅಷ್ಟೆ ಸೀಮಿತವಾಗಿಲ್ಲ ನಮ್ಮ ದೇಶದಲ್ಲೇ ಒಂದು ರಾಜ್ಯದಿಂದ ಮತ್ತೊಂದು ರಾಜ್ಯದಲ್ಲಿ ವಿಭಿನ್ನತೆಯನ್ನು ಕಾಣಬಹುದು.

ನಮ್ಮ ಭೌಗೋಳಿಕ ಮತ್ತು ಆರೋಗ್ಯದಲ್ಲಿ ಜನಪದ ಸಂಸ್ಕೃತಿ ವ್ಯಾಪಿಸಿಕೊಂಡಿದೆ. ಭೌಗೋಳಿಕವಾಗಿ ನೋಡುವುದಾದರೆ ಮಳೆಗಾಲ, ಚಳಿಗಾಲ, ಬೇಸಿಗೆಕಾಲ ಹೀಗೆ ವಿಂಗಡಿಸುತ್ತೇವೆ. ಆದರೆ ಈ ಕಾಲಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೇ ವಿಭಿನ್ನ. ಆದರೆ ಅಲ್ಲಿನ ವಾತಾವರಣ ಹವಾಮಾನಕ್ಕೆ ತಕ್ಕಂತೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ. ನಮ್ಮ ಜನಪದ ಸಂಸ್ಕೃತಿ ನಮ್ಮ ಬಯಲು ಸೀಮೆಯ ವಿಷಯಕ್ಕೆ ಬಂದರೆ,  ಜೂನ್ ತಿಂಗಳಲ್ಲಿ ಮಳೆಗಾಲ ಆರಂಭವಾದರೆ ಆ ದಿನಗಳಲ್ಲಿ ನಮ್ಮ ಕೆಲಸ ಕಾರ್ಯಗಳಿಗೆ ಹೊತ್ತು ಕೊಡುತ್ತೇವೆ. ಆ ದಿನಗಳಲ್ಲಿ ಯಾವುದೇ ನಮ್ಮ ಹಬ್ಬ ಹರಿದಿನಗಳು, ಜನಪದ ಸಾಂಸ್ಕೃತಿಕ ಆಚರಣೆಗಳು ಇರುವುದಿಲ್ಲ. ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿನಿಂದ ಆರಂಭಗೊಳ್ಳುವ ಈ ನಮ್ಮ ಆಚರಣೆಗಳು, ಬೇಸಿಗೆ ಕಾಲಕ್ಕೆ ಹೆಚ್ಚಾಗುತ್ತ ಹೋಗುತ್ತವೆ. ಕಾರಣ ಆಗ ಸುಗ್ಗಿಕಾಲ ಮುಗಿದು ಬೇಸಿಗೆಯ ಕಾಲ ಆರಂಭವಾಗಿ ಕೆಲಸ ಕಾರ್ಯಗಳಿಗೆ ಸ್ವಲ್ಪ ವಿರಾಮ ಇರುತ್ತದೆ.

ಇನ್ನೂ ನಮ್ಮ ಜನಪದ ಆರೋಗ್ಯಕ್ಕೆ ಎಷ್ಟು ಹತ್ತಿರವಾಗಿದೆ ಎಂದರೆ ಕೆಲವು ಉದಾಹರಣೆಗಳ ಮೂಲಕ ತಿಳಿಯಬಹುದು. ನಮ್ಮ ಹಬ್ಬಗಳಿಗೆ ಇಂತಹುದ್ದೆ ತಿಂಡಿ – ತಿನಿಸುಗಳನ್ನು ಮಾಡಬೇಕು ಕಾಲಮಾನಗಳನ್ನು ಒಳಗೊಂಡಂತೆ ಹೀಗೆಯೇ ಆಚರಣೆ ಮಾಡಬೇಕು ಎಂಬುದನ್ನು ಕಾಣುತ್ತೇವೆ. ಇಂತಹ ಆಚರಣೆಗಳನ್ನು ವೈಜ್ಞಾನಿಕ ದೃಷ್ಟಿಕೋನ ಇಟ್ಟುಕೊಂಡು ನೋಡುವುದಾದರೆ, ನಾವು ಸಂಕ್ರಾಂತಿ ಹಬ್ಬಕ್ಕೆ ಎಳ್ಳು, ಬೆಲ್ಲ, ಕೊಬ್ಬರಿ, ಕಬ್ಬು ಹಂಚುತ್ತೇವೆ. ಕಾರಣ ನೋಡುವುದಾದರೆ, ಚಳಿಗಾಲದಲ್ಲಿ ನಮ್ಮ ದೇಹದಲ್ಲಿನ ಎಣ್ಣೆ ಅಂಶ ಕಡಿಮೆಯಾಗಿ ಚರ್ಮ ಒಣಗುತ್ತದೆ. ಆಗ ಆರೋಗ್ಯದಲ್ಲಿ ಏರು–ಪೇರು ಕಾಣುತ್ತೇವೆ. ಅದಕ್ಕೆ ಜನಪದರು ದೇಹಕ್ಕೆ ಎಣ್ಣೆ ಅಂಶಗಳು ಸೇರಲಿ ಎಂದು ಎಣ್ಣೆ ಅಂಶವಿರುವಂತಹ ಎಳ್ಳು,ಬೆಲ್ಲ, ಕೊಬ್ಬರಿ ಕಡಲೆಬೀಜ ಕೊಡುತ್ತಾರೆ. ಅದಕ್ಕೆ ಸಾಂಪ್ರದಾಯಿಕ ವಾಡಿಕೆಯ ಮಾತು ಉಂಟು. ಎಳ್ಳು–ಬೆಲ್ಲ ತಿಂದು ಒಳ್ಳೆಯ ಮಾತಾಡು ಅಂತ ಹೇಳುವ ಸಂಪ್ರದಾಯ ಉಂಟು. ಅದೇ ರೀತಿ ಯುಗಾದಿ ಹಬ್ಬಕ್ಕೆ ಎಣ್ಣೇ ಸ್ನಾನ ಮಾಡುತ್ತಾರೆ. ಕಾರಣ ದಣಿದ ದೇಹಕ್ಕೆ ಒಣಗಿದ ಚರ್ಮಕ್ಕೆ ಎಣ್ಣೆ ಅಂಶ ಸೇರಿ ದೇಹ ಆರೋಗ್ಯಕರವಾಗಿರಲಿ ಎಂದು. ಇಂದಿಗೂ ಶುಭದ ಸಂಕೇತವಾಗಿ ಹಬ್ಬದ ಆಚರಣೆ ವೇಳೆ ಮಾವಿನ ಮತ್ತು ಬೇವಿನ ತೋರಣ ಕಟ್ಟುತ್ತೇವೆ. ಇಂದಿಗೂ ಎಷ್ಟೋ ಜನರಿಗೆ ಇದರ ಕಾರಣ ತಿಳಿದಿಲ್ಲ. ಕೇವಲ ಸಾಂಸ್ಕೃತಿಕ ಆಚರಣೆ ರೂಪದಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಹೀಗೇ ನೋಡುತ್ತಾ ಹೋದರೆ ಅರಳಿ, ತುಳಸಿ, ಎಕ್ಕದ ಗಿಡ ಇಂದಿಗೂ ಒಂದೊಂದು ರೀತಿಯಲ್ಲಿ ಪೂಜನೀಯ ಸ್ಥಾನವನ್ನು ಪಡೆದಿದೆ. ಮನೆಯ ಮುಂದೆ ತುಳಸಿ ಯಾಕೆ? ಎಂದು ಸೂಕ್ಷ್ಮವಾಗಿ ಗಮನಿಸಿದಾಗ ಇವೆಲ್ಲವೂ ನಮ್ಮ ಆರೋಗ್ಯಕ್ಕೆ ಬಹಳಷ್ಟು ಹತ್ತಿರವಾದವುಗಳು. ಇದು ನಮ್ಮ ಜನಪದ ಸಂಸ್ಕೃತಿ ಕಟ್ಟಿಕೊಟ್ಟ ಶೈಲಿಯಾಗಿದೆ.

* ನಮ್ಮ ಜನದಪ ಹಾಡಿಸುತ್ತದೆ ಹಾಗೂ ಕುಣಿಸುತ್ತದೆ.
* ಕೇವಲ ಬಾಯಿಂದ ಬಾಯಿಗೆ ಬಂದಿದ್ದೇ ನಮ್ಮ ಜನಪದ
* ಯುವ ಜನತೆಗೆ ಜನಪದ ಸಂಸ್ಕೃತಿಯ ಉಪಚಾರವಾಗಬೇಕು ಹಾಗೂ ಜನಪದ ಉಳಿಯಬೇಕು ಮತ್ತು ಬೆಳೆಯಬೇಕು.



**ಚನ್ನಯ್ಯ ಅರ್ ಎಸ್ ಹಿರೇಮಠ**
**First Year B A**

ಕಣ್ಣು ತೆರೆದಾಗಿನಿಂದ ಕಣ್ಣು ಮುಚ್ಚುವ ತನಕ ಮಾಡಿದ ಸಾಧನೆ.
ಕಣ್ಣು ಮುಚ್ಚಿದಾಗಲು ಜನ ಹೆಸರೇಳಿ ಗುರುತಿಸಿದರೆ ಮಾತ್ರ
ಕಣ್ಣು ತೆರೆದಕ್ಕು ಸಾರ್ಥಕವಾಯಿತೋ ಮಾನವ.

ಉರಿಯದ ಒಲೆ
ಶಿಕ್ಷಣ ಪಡೆಯದ ಅಜ್ಞಾನಿ
ತಿರುಗದ ಗಡಿಯಾರ
ಕಿಟಕಿ ಬಾಗಿಲಿಲ್ಲದ ಮನೆ ಇದ್ದರೆಷ್ಟು ಬಿಟ್ಟರೆಷ್ಟು

ಕೈ ಎತ್ತಿದರೆ ಆಕಾಶ ಸಿಗದು
ಸಮುದ್ರಕ್ಕೆ ಕೈ ಹಾಕಿದರೆ ತಳ ಸಿಗದು ಹಾಗೆ
ಪರಿಶ್ರಮವಿಲ್ಲದ ಕೆಲಸಕ್ಕೆ ಫಲ ಸಿಗದು.



**Bharath R.S.**
1st Year B.B.A.

# ನಮ್ಮ ಕಾಲೇಜಿನ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು



ಅಸ್ಗರ್ ಅಲಿ ಸಿ.ಬಿ.

ಅಂತಿಮ ಬಿ.ಕಾಂ

**91%**



ನಿಸರ್ಗ ಬಿ.ಆರ್.

ಅಂತಿಮ ಬಿ.ಕಾಂ.

**90%**



ಸಂಗೀತ ಎಂ.ಎಸ್.

ಅಂತಿಮ ಬಿ.ಕಾಂ

**90%**



ಕಾವ್ಯ ಆರ್.ಆರ್.

ಅಂತಿಮ ಬಿ.ಕಾಂ

**90%**



ಪ್ರೀತಿ ಎಸ್.

ಎಂ.ಕಾಂ.

**69%**
